Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

सं–1 नई दिल्ली सोमवार, जनवरी 20, 1992 पुष्य 30, 1913 (शक) खण्ड–13
ಸಂಚಿಕೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ ಪುಷ್ಯ ೩೦, ೧೯೧೩ (ಶಕ) ಸಂಪುಟ ೧೩
No. 1 New Delhi Monday, January 20, 1992 Pushya 30, 1913 (Saka) Vol. 13

## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ ([illegible])ರ [illegible] ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

## Ministry of Law, Justice & Company Affairs
### (Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯಗಳು ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಚೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## Ministry of Law, Justice & Company Affairs
### (Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ್‌ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಅಧಿನಿಯಮ, 1950 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತ ಅಂಚೆ ಕಚೇರಿ ಅಧಿನಿಯಮ, 1898

(1898ರ ಅಧಿನಿಯಮ ಸಂಖ್ಯೆ 6)

[22ನೇ ಮಾರ್ಚ್, 1898]

ಭಾರತದಲ್ಲಿನ ಅಂಚೆ ಕಚೇರಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಭಾರತದಲ್ಲಿನ ಅಂಚೆ ಕಚೇರಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ; ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ-I

### ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ:**—(1) ಈ ಅಧಿನಿಯಮವನ್ನು ಭಾರತ ಅಂಚೆ ಕಚೇರಿ ಅಧಿನಿಯಮ, 1898 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ; ಮತ್ತು ಭಾರತದ ಹೊರಗಿರುವ ಎಲ್ಲ ಭಾರತೀಯ ನಾಗರಿಕರಿಗೂ ಅನ್ವಯವಾಗುತ್ತದೆ.

(3) ಇದು 1898ನೇ ಜುಲೈ ಒಂದನೇ ದಿನದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:**—ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,—

(ಕ) "ಮಹಾನಿರ್ದೇಶಕ" ಎಂಬ ಪದಕ್ಕೆ ಅಂಚೆ ಮತ್ತು ತಂತಿಗಳ ಮಹಾನಿರ್ದೇಶಕ ಎಂದರ್ಥ;

(ಖ) ಅಂಚೆ ವಸ್ತುವಿಗೆ ಸಂಬಂಧಿಸಿದಂತೆ ಉಪಯೋಗಿಸಿದ "ಅಂತರ್ದೇಶೀಯ" ಎಂಬ ಪದವು—

(i) ಭಾರತದಲ್ಲಿ ಅಂಚೆಗೆ ಹಾಕಿದ ಮತ್ತು ಭಾರತದಲ್ಲಿನ ಯಾವುದೇ ಸ್ಥಳಕ್ಕೆ ಅಥವಾ ಭಾರತದ ಪರಿಮಿತಿಗಳಾಚೆ ಕೇಂದ್ರ ಸರ್ಕಾರವು ಯಾವ ಸ್ಥಳಕ್ಕಾಗಿ ಅಂಚೆ ಕಚೇರಿಯನ್ನು ಸ್ಥಾಪಿಸಿದೆಯೋ ಆ ಸ್ಥಳಕ್ಕೆ ವಿಳಾಸಿಸಿದ್ದು; ಅಥವಾ

(ii) ಭಾರತದ ಪರಿಮಿತಿಗಳಾಚೆ ಕೇಂದ್ರಸರ್ಕಾರವು ಸ್ಥಾಪಿಸಿದ ಯಾವುದೇ ಅಂಚೆ ಕಚೇರಿಯಲ್ಲಿ ಅಂಚೆಗೆ ಹಾಕಿದ ಮತ್ತು ಯಾವುದೇ ಅಂಥ ಅಂಚೆ ಕಚೇರಿಯನ್ನು ಯಾವ ಸ್ಥಳಕ್ಕಾಗಿ ಸ್ಥಾಪಿಸಲಾಗಿದೆಯೋ ಆ ಯಾವುದೇ ಸ್ಥಳಕ್ಕೆ ಅಥವಾ ಭಾರತದಲ್ಲಿನ ಯಾವುದೇ ಸ್ಥಳಕ್ಕೆ ವಿಳಾಸಿಸಿದ್ದು — ಎಂದು ಅರ್ಥ :

ಪರಂತು, "ಅಂತರ್ದೇಶೀಯ" ಎಂಬ ಪದವು ಕೇಂದ್ರಸರ್ಕಾರವು ಈ ಬಗ್ಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಅಧಿಸೂಚನೆಯಲ್ಲಿ ವಿವರಿಸಬಹುದಾದ ಯಾವುವೇ ಸ್ಥಳಗಳಲ್ಲಿ ಅಥವಾ ಸ್ಥಳಗಳಿಗೆ ಅಥವಾ ಅಂಚೆ ಕಚೇರಿಗಳಿಗೆ ವಿಳಾಸಿಸಿದ ಅಂಚೆ ವಸ್ತುಗಳ ಯಾವುದೇ ವರ್ಗಕ್ಕೆ ಅನ್ವಯಿಸತಕ್ಕದ್ದಲ್ಲ ;

(ಗ) "ಅಂಚೆ ಚೀಲ" ಎಂಬ ಪದವು ಯಾವ ಚೀಲ, ಪೆಟ್ಟಿಗೆ, ಭಾಂಗಿ ಅಥವಾ ಯಾವುದೇ ಇತರ ಲಕೋಟೆ ಅಥವಾ ಹೊದಿಕೆಯಲ್ಲಿ ಅಂಚೆ ವಸ್ತುಗಳನ್ನು, ಅದು ಅಂಥ ಯಾವುದೇ ವಸ್ತುವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ ಸಾಗಣೆಯ ಕ್ರಮದಲ್ಲಿ ಅಂಚೆ ಮೂಲಕ ಸಾಗಿಸಲಾಗುತ್ತಿದೆಯೋ ಆ ಚೀಲ, ಪೆಟ್ಟಿಗೆ, ಭಾಂಗಿ ಅಥವಾ ಇತರ ಲಕೋಟೆ ಅಥವಾ ಹೊದಿಕೆಯನ್ನು ಒಳಗೊಳ್ಳುತ್ತದೆ ;

(ಘ) "ಅಂಚೆ ಹಡಗು" ಎಂಬ ಪದಕ್ಕೆ ಅಂಚೆಯನ್ನು ಒಯ್ಯಲು ಕೇಂದ್ರ ಸರ್ಕಾರ ಅಥವಾ ಹರ್ ಮೆಜೆಸ್ಟಿ ಸರ್ಕಾರ ಅಥವಾ ಬ್ರಿಟಿಷ್ ಸ್ವಾಧೀನದಲ್ಲಿನ ಯಾವುದೇ ಸರ್ಕಾರ ಅಥವಾ ವಿದೇಶೀ ಸರ್ಕಾರವು ಕರಾರು ಅಥವಾ ಮುಂದುವರಿದ ಒಪ್ಪಂದಕ್ಕೆ ಅನುಸಾರವಾಗಿ ಅಂಚೆಗಳನ್ನು ಸಾಗಿಸಲು ನಿಯೋಜಿಸಿದ ಹಡಗು ಎಂದರ್ಥ;

(ಙ) "ಅಂಚೆ ಕಚೇರಿ ಅಧಿಕಾರಿ" ಎಂಬ ಪದವು ಅಂಚೆ ಕಚೇರಿಯ ಅಥವಾ ಅಂಚೆ ಕಚೇರಿಯ ಪರವಾಗಿ ಯಾವುದೇ ವ್ಯವಹಾರದಲ್ಲಿ ನಿಯೋಜಿತನಾದ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಚ) "ಅಂಚೆ ಹಾಸಲು" ಎಂಬ ಪದಕ್ಕೆ ಅಂಚೆ ವಸ್ತುಗಳನ್ನು ಅಂಚೆ ಮೂಲಕ ರವಾನಿಸುವುದಕ್ಕಾಗಿ ವಿಧಿಸಬಹುದಾದ ಸುಂಕ ಎಂದರ್ಥ;

(ಛ) "ಅಂಚೆ ಸ್ಟಾಂಪು" ಎಂಬ ಪದಕ್ಕೆ, ಈ ಅಧಿನಿಯಮದ ಮೇರೆಗೆ ಅಂಚೆಯ ವಸ್ತುಗಳಿಗೆ ಸಂಬಂಧಪಟ್ಟಂತೆ ಸಂದಾಯ ಮಾಡಬೇಕಾದ ಅಂಚೆ ಹಾಸಲು ಅಥವಾ ಇತರ ಫೀಜುಗಳು ಅಥವಾ ಮೊತ್ತಗಳನ್ನು ಸೂಚಿಸುವುದಕ್ಕೆ ಕೇಂದ್ರ ಸರ್ಕಾರವು ಒದಗಿಸಿದ ಯಾವುದೇ ಸ್ಟಾಂಪು ಎಂದರ್ಥ, ಮತ್ತು ಅದು ಅಂಟಿಸುವ ಅಂಚೆ ಹಾಸಲು ಸ್ಟಾಂಪುಗಳು ಮತ್ತು ಯಾವುದೇ ಲಕೋಟೆ, ಹೊದಿಕೆ ಕಾಗದ, ಪೋಸ್ಟ್ ಕಾರ್ಡ್ ಅಥವಾ ಇತರ ವಸ್ತುವಿನ ಮೇಲೆ ಮುದ್ರಿಸಿದ, ಉಬ್ಬಚ್ಚು ಮಾಡಿದ, ಒತ್ತಿದ ಅಥವಾ ಅನ್ಯಥಾ ಸೂಚಿಸಿದ ಸ್ಟಾಂಪುಗಳನ್ನು ಒಳಗೊಳ್ಳುತ್ತದೆ;

(ಜ) "ಅಂಚೆ ಕಚೇರಿ" ಎಂಬ ಪದವು, ಅಂಚೆ ಕಚೇರಿಯ ಉದ್ದೇಶಗಳಿಗಾಗಿ ಉಪಯೋಗಿಸಿದ ಪ್ರತಿಯೊಂದು ಮನೆ, ಕಟ್ಟಡ, ಕೊಠಡಿ, ವಾಹನ ಅಥವಾ ಸ್ಥಳವನ್ನು ಒಳಗೊಳ್ಳುತ್ತದೆ, ಮತ್ತು ಅಂಚೆ ವಸ್ತುಗಳನ್ನು ಸ್ವೀಕರಿಸುವುದಕ್ಕಾಗಿ ಅಂಚೆ ಕಚೇರಿಯು ಒದಗಿಸಿದ ಪ್ರತಿಯೊಂದು ಟಪಾಲು ಪೆಟ್ಟಿಗೆಯನ್ನು ಒಳಗೊಳ್ಳುತ್ತದೆ ;

(ಝ) "ಅಂಚೆ ವಸ್ತು" ಎಂಬ ಪದವು ಅಂಚೆ ಮೂಲಕ ರವಾನಿಸಬಹುದಾದ ಕಾಗದ, ಪೋಸ್ಟ್ ಕಾರ್ಡ್, ವೃತ್ತಪತ್ರಿಕೆ, ಪುಸ್ತಕ, ನಮೂನೆ ಅಥವಾ ಮಾದರಿ ಪೊಟ್ಟಣ, ಭಾಗ ಮತ್ತು ಪ್ರತಿಯೊಂದು ಸಾಮಗ್ರಿ ಅಥವಾ ವಸ್ತುವನ್ನು ಒಳಗೊಳ್ಳುತ್ತದೆ;

(ಞ) "ಪೋಸ್ಟ್ ಮಾಸ್ಟರ್ ಜನರಲ್" ಎಂಬ ಪದವು ಪೋಸ್ಟ್ ಮಾಸ್ಟರ್ ಜನರಲ್ಲನ ಅಧಿಕಾರಗಳನ್ನು ಚಲಾಯಿಸುವ ಉಪ ಪೋಸ್ಟ್ ಮಾಸ್ಟರ್ ಜನರಲ್ ಅಥವಾ ಇತರ ಅಧಿಕಾರಿಯನ್ನು ಒಳಗೊಳ್ಳುತ್ತದೆ; ಮತ್ತು

(ಟ) "ಅಂಚೆ ಇಲಾಖೆ" ಎಂಬ ಪದಕ್ಕೆ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಗಳಿಗಾಗಿ ಸ್ಥಾಪಿತವಾದ ಮತ್ತು ಮಹಾನಿರ್ದೇಶಕನು ಅಧ್ಯಕ್ಷನಾಗಿರುವ ಇಲಾಖೆ ಎಂದರ್ಥ.

3. **"ಅಂಚೆಯ ಮೂಲಕ ರವಾನೆಯ ಕ್ರಮದಲ್ಲಿ" ಮತ್ತು "ವಶಾವಣೆ"ಗಳ ಅರ್ಥ:**—ಈ ಅಧಿನಿಯಮದ ಉದ್ದೇಶಗಳಿಗಾಗಿ,—

(ಕ) ಅಂಚೆಯ ವಸ್ತುವು, ಅಂಚೆ ಕಚೇರಿಗೆ ಅದನ್ನು ವಶಾವಣೆ ಮಾಡಿದ ಕಾಲದಿಂದ ಅದು ವಿಳಾಸದಾರನಿಗೆ ವಶಾವಣೆಯಾಗುವ ಅಥವಾ ಕಳುಹಿಸಿದವನಿಗೆ ಅದನ್ನು ವಾಪಸು ಮಾಡುವ ಅಥವಾ VIIನೇ ಅಧ್ಯಾಯದ ಮೇರೆಗೆ ಅನ್ಯಥಾ ವಿಲೆ ಮಾಡುವ ಕಾಲದವರೆಗೆ ಅದು, ಅಂಚೆ ಮೂಲಕ ರವಾನೆಯ ಕ್ರಮದಲ್ಲಿರುವುದಾಗಿ ಭಾವಿಸತಕ್ಕದ್ದು;

(ಖ) ಯಾವುದೇ ವಿವರಣೆಯ ಅಂಚೆ ವಸ್ತುವನ್ನು ಪೋಸ್ಟ್‌ಮನ್ನನಿಗೆ ಅಥವಾ ಅಂಚೆಗಾಗಿ ಆ ವಿವರಣೆಯ ಅಂಚೆಯ ವಸ್ತುಗಳನ್ನು ಸ್ವೀಕರಿಸಲು ಅಧಿಕೃತನಾದ ಇತರ ವ್ಯಕ್ತಿಗೆ ಬಟವಾಡೆ ಮಾಡಿದಾಗ, ಅದನ್ನು ಅಂಚೆ ಕಚೇರಿಗೆ ವಶಾವಣೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು; ಮತ್ತು

(ಗ) ಅಂಚೆ ವಸ್ತುವನ್ನು, ವಿಳಾಸದಾರನ ಮನೆ ಅಥವಾ ಕಚೇರಿಗೆ, ಅಥವಾ ವಿಳಾಸದಾರನಿಗೆ ಅಂಚೆಯ ವಸ್ತುಗಳನ್ನು ಬಟವಾಡೆ ಮಾಡುವ ಅಥವಾ ವಾಡಿಕೆಯ ರೀತಿಗನುಸಾರವಾಗಿ ವಸ್ತುವನ್ನು ಸ್ವೀಕರಿಸಲು ಅಧಿಕೃತನಾಗಿದ್ದಾನೆಂದು ಪರಿಗಣಿಸಿದ ಅವನ ನೌಕರ ಅಥವಾ ಏಜೆಂಟ್ ಅಥವಾ ಇತರ ವ್ಯಕ್ತಿಗೆ ಮಾಡಿದ ವಶಾವಣೆಯನ್ನು ವಿಳಾಸದಾರನಿಗೆ ಮಾಡಿದ ಬಟವಾಡೆಯೆಂದು ಭಾವಿಸತಕ್ಕದ್ದು.

## ಅಧ್ಯಾಯ—II

### ಸರ್ಕಾರದ ವಿಶೇಷಾಧಿಕಾರ ಮತ್ತು ರಕ್ಷಣೆ

4. **ಪತ್ರಗಳನ್ನು ಒಯ್ಯುವ ಅನನ್ಯ ವಿಶೇಷಾಧಿಕಾರವು ಸರ್ಕಾರಕ್ಕೆ ವಿಹಿಸಲಾದುದು:**—(1) ಕೇಂದ್ರ ಸರ್ಕಾರವು ಭಾರತದೊಳಗಿನ ಅಂಚೆಗಳು ಅಥವಾ ಅಂಚೆ ಸಂಪರ್ಕಗಳನ್ನು ಸ್ಥಾಪಿಸಿರುವಲ್ಲೆಲ್ಲಾ, ಕೇಂದ್ರ ಸರ್ಕಾರವು ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿ, ಎಲ್ಲ ಪತ್ರಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಂಚೆ ಮೂಲಕ ಒಯ್ಯುವ ಅನನ್ಯ ವಿಶೇಷಾಧಿಕಾರವನ್ನು ಹೊಂದಿರತಕ್ಕದ್ದು, ಮತ್ತು ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿ, ಎಲ್ಲ ಪತ್ರಗಳನ್ನು ಸ್ವೀಕರಿಸುವ, ಸಂಗ್ರಹಿಸುವ, ಕಳುಹಿಸುವ, ರವಾನಿಸುವ ಮತ್ತು ವಶಾವಣೆ ಮಾಡುವ ಎಲ್ಲ ಪ್ರಾಸಂಗಿಕ ಸೇವೆಗಳನ್ನು ನೆರವೇರಿಸುವ ಅನನ್ಯ ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:—

(ಕ) ಪತ್ರಗಳನ್ನು ಸ್ವೀಕರಿಸಲು, ಒಯ್ಯಲು ಅಥವಾ ಅವುಗಳನ್ನು ವಶಾವಣೆ ಮಾಡಲು, ಯಾವುದೇ ಬಾಡಿಗೆ, ಬಹುಮಾನ ಅಥವಾ ಇತರ ಲಾಭ ಅಥವಾ ಪ್ರಯೋಜನವಿಲ್ಲದೆ ತನ್ನ ದಾರಿ, ಪ್ರವಾಸ ಅಥವಾ ಪ್ರಯಾಣ ಕಾಲದಲ್ಲಿ ಕಾಗದಗಳನ್ನು ಯಾರಿಗೆ ನಿರ್ದೇಶಿಸಲಾಗಿದೆಯೋ, ಆ ವ್ಯಕ್ತಿಗೆ ತಲುಪಿಸುವಂತೆ ಖಾಸಗೀ ಸ್ನೇಹಿತನ ಮೂಲಕ ಕಳುಹಿಸಿದ ಪತ್ರಗಳು;

(ಖ) ಉದ್ದೇಶಕ್ಕಾಗಿ ಸಂದೇಶವಾಹಕನ ಮೂಲಕ ಕಳುಹಿಸಿದ, ಅವುಗಳನ್ನು ಕಳುಹಿಸುವವನ ಅಥವಾ ಸ್ವೀಕರಿಸುವವನ ವ್ಯವಹಾರಗಳಿಗೆ ಮಾತ್ರ ಸಂಬಂಧಪಟ್ಟ ಪತ್ರಗಳು; ಮತ್ತು

(ಗ) ಪತ್ರಗಳನ್ನು ಸ್ವೀಕರಿಸಲು, ಒಯ್ಯಲು ಅಥವಾ ಅವುಗಳನ್ನು ವಶಾವಣೆ ಮಾಡಲು, ಯಾವುದೇ ಬಾಡಿಗೆ, ಬಹುಮಾನ ಅಥವಾ ಇತರ ಲಾಭ ಅಥವಾ ಪ್ರಯೋಜನವಿಲ್ಲದೆ, ಪತ್ರಗಳು ಸಂಬಂಧಪಡುವಂಥ ಸರಕುಗಳು ಅಥವಾ ಸ್ವತ್ತಿನೊಂದಿಗೆ ವಶಾವಣೆ ಮಾಡಬೇಕೆಂದು ಸಮುದ್ರ ಮೂಲಕವಾಗಲಿ ಅಥವಾ ಭೂಮಿಯ ಮೂಲಕವಾಗಲಿ ಕಳುಹಿಸಿದ ಸರಕುಗಳು ಅಥವಾ ಸ್ವತ್ತಿಗೆ ಮಾತ್ರವೇ ಸಂಬಂಧಪಡುವ ಪತ್ರಗಳು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಅಂಚೆ ಮೂಲಕವಲ್ಲದೆ ಅನ್ಯಥಾ ರವಾನಿಸುವ ಉದ್ದೇಶಕ್ಕಾಗಿ ಹಿಂದೆ ಹೇಳಿದಂತೆ ವಿನಾಯಿತಿಗೊಳಿಸಿದ ಪತ್ರಗಳ ಸಂಗ್ರಹಣೆ ಮಾಡಲು ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(2) ಈ ಪ್ರಕರಣ ಮತ್ತು 5ನೇ ಪ್ರಕರಣದ ಉದ್ದೇಶಗಳಿಗಾಗಿ "ಪತ್ರಗಳು" ಎಂಬ ಪದವು ಪೋಸ್ಟ್ ಕಾರ್ಡುಗಳನ್ನು ಒಳಗೊಳ್ಳುತ್ತದೆ.

5. **ಪತ್ರಗಳನ್ನು ಸಾಗಿಸಲು ಕೆಲವು ವ್ಯಕ್ತಿಗಳನ್ನು ಸ್ಪಷ್ಟವಾಗಿ ನಿಷೇಧಿಸಲಾಗಿದೆ:**—ಕೇಂದ್ರ ಸರ್ಕಾರವು ಭಾರತದೊಳಗೆ ಅಂಚೆ ಅಥವಾ ಅಂಚೆಯ ಸಂಪರ್ಕಗಳನ್ನು ಸ್ಥಾಪಿಸಿರುವಲ್ಲೆಲ್ಲಾ ಈ ಕೆಳಗಿನ ವ್ಯಕ್ತಿಗಳು ಪತ್ರಗಳನ್ನು ಸಂಗ್ರಹಿಸಲು, ಒಯ್ಯಲು, ನೀಡಲು ಅಥವಾ ವಶಾವಣೆ ಮಾಡಲು ಅಥವಾ ಅವುಗಳನ್ನು ಒಯ್ಯುವ ಅಥವಾ ವಶಾವಣೆ ಮಾಡುವ ಉದ್ದೇಶಕ್ಕಾಗಿ ಪತ್ರಗಳನ್ನು ಸ್ವೀಕರಿಸಲು, ಅವರು ಹಾಗೆ ಮಾಡಲು ಯಾವುದೇ ಬಾಡಿಗೆ, ಬಹುಮಾನ ಅಥವಾ ಇತರ ಲಾಭ ಅಥವಾ ಪ್ರಯೋಜನವನ್ನು ಪಡೆಯದೆ ಇದ್ದಾಗ್ಯೂ, ಅವರನ್ನು ಸ್ಪಷ್ಟವಾಗಿ ನಿಷೇಧಿಸಲಾಗಿದೆ, ಎಂದರೆ:—

(ಕ) ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಮಾನ್ಯವಾಗಿ ಸಾಗಿಸುವವರು ಮತ್ತು ಅವರ ಗಾಡಿಗಳಲ್ಲಿನ ಅಥವಾ ವಾಹನಗಳಲ್ಲಿನ ಸರಕುಗಳಿಗೆ ಮಾತ್ರವೇ ಸಂಬಂಧಿಸಿರುವ ಪತ್ರಗಳಿಗೆ ಸಂಬಂಧಪಟ್ಟಂತೆ ಹೊರತು, ಅವರ ಸೇವಕರು ಅಥವಾ ಏಜೆಂಟರು;

(ಖ) ಭಾರತದಲ್ಲಿನ ಯಾವುದೇ ನದಿ ಅಥವಾ ನಾಲೆಯ ಮೇಲೆ ಅಥವಾ ಭಾರತದಲ್ಲಿನ ಯಾವುವೇ ಬಂದರುಗಳು ಅಥವಾ ಸ್ಥಳಗಳ ನಡುವೆ ಹೋಗುವ ಅಥವಾ ಹಾದುಹೋಗುವ ನೌಕೆಗಳ ಒಡೆಯರು ಅಥವಾ ಮಾಸ್ಟರು ಮತ್ತು ಹಡಗಿನಲ್ಲಿರುವ ವಸ್ತುಗಳಿಗೆ ಮಾತ್ರವೇ ಸಂಬಂಧಿಸಿರುವ ಪತ್ರಗಳಿಗೆ ಸಂಬಂಧಪಟ್ಟಂತೆ ಹೊರತು, ಮತ್ತು VIIIನೇ ಅಧ್ಯಾಯದ ಮೇರೆಗೆ ಸಾಗಿಸುವುದಕ್ಕಾಗಿ ಸ್ವೀಕರಿಸಿದ ಅಂಚೆಯ ವಸ್ತುಗಳಿಗೆ ಸಂಬಂಧಪಟ್ಟಂತೆ ಹೊರತು, ಅವರ ನೌಕರರು ಅಥವಾ ಏಜೆಂಟರು.

6. **ನಷ್ಟ, ತಪ್ಪು ಬಟವಾಡೆ, ವಿಳಂಬ ಅಥವಾ ಹಾನಿಗಾಗಿ ಹೊಣೆಗಾರಿಕೆಯಿಂದ ವಿನಾಯಿತಿ:**—ಸರ್ಕಾರವು ಅಂಚೆಯ ಮೂಲಕ ರವಾನಿಸುವ ಕ್ರಮದಲ್ಲಿ ಯಾವುದೇ ಅಂಚೆಯ ವಸ್ತುವಿಗೆ ಆದ ಯಾವುದೇ ನಷ್ಟ, ತಪ್ಪು ಬಟವಾಡೆ ಅಥವಾ ವಿಳಂಬ ಅಥವಾ ಹಾನಿಯ ಕಾರಣದಿಂದಾಗಿ ಯಾವುದೇ ಹೊಣೆಗಾರಿಕೆಗೆ, ಅಂಥ ಹೊಣೆಗಾರಿಕೆಯು, ಈ ಮುಂದೆ ಉಪಬಂಧಿಸಿದಂತೆ ಕೇಂದ್ರ ಸರ್ಕಾರವು ಸ್ಪಷ್ಟ ನಿಬಂಧನೆಯ ಮೇರೆಗೆ ವಹಿಸಿಕೊಳ್ಳಬಹುದಾದಷ್ಟರ ಮಟ್ಟಿಗೆ ಹೊರತು ಗುರಿಯಾಗತಕ್ಕದ್ದಲ್ಲ; ಮತ್ತು ಅಂಚೆ ಇಲಾಖೆಯ ಯಾವನೇ ಅಧಿಕಾರಿಯು, ಯಾವುದೇ ಅಂಥ ನಷ್ಟ, ತಪ್ಪು ಬಟವಾಡೆ, ವಿಳಂಬ ಅಥವಾ ಹಾನಿಯ ಕಾರಣದಿಂದಾಗಿ ಯಾವುದೇ ಹೊಣೆಗಾರಿಕೆ, ಅದನ್ನು ಅವನು ಮೋಸದಿಂದ ಅಥವಾ ಉದ್ದೇಶ ಪೂರ್ವಕ ಕಾರ್ಯ ಅಥವಾ ತಪ್ಪಿತದಿಂದ ಉಂಟು ಮಾಡಿರುವ ಹೊರತು ಗುರಿಯಾಗತಕ್ಕದ್ದಲ್ಲ.

## ಅಧ್ಯಾಯ–III

### ಅಂಚೆ ಹಾಸಲು

7. **ಅಂತರ್ದೇಶಿ ಅಂಚೆ ಹಾಸಲಿನ ದರಗಳನ್ನು ನಿಗದಿಪಡಿಸುವ ಅಧಿಕಾರ:**— (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಅಂತರ್ದೇಶಿ ಅಂಚೆಯ ಮೂಲಕ ಕಳುಹಿಸಿದ ಅಂಚೆಯ ವಸ್ತುಗಳ ಸಂಬಂಧದಲ್ಲಿ ವಿಧಿಸಬೇಕಾದ ಅಂಚೆಯ ಹಾಸಲು ದರಗಳನ್ನು ಮತ್ತು ಇತರ ಮೊತ್ತಗಳನ್ನು ಮತ್ತು ಯಾವ ತೂಕಗಳ ಶ್ರೇಣಿ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಹಾಗೆ ನಿಗದಿಪಡಿಸಿದ ದರಗಳನ್ನು ವಿಧಿಸತಕ್ಕದ್ದೋ ಆ ತೂಕಗಳ ಶ್ರೇಣಿ, ನಿಬಂಧನೆ ಮತ್ತು ಷರತ್ತುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು :

ಪರಂತು, ಅಂಚೆ ಹಾಸಲಿನ ಅತ್ಯಂತ ಹೆಚ್ಚಿನ ದರವನ್ನು ಮೊದಲೇ ಸಂದಾಯ ಮಾಡಿದರೆ, ಅದು ಮೊದಲನೇ ಅನುಸೂಚಿಯಲ್ಲಿ ಅಂಚೆ ಹಾಸಲಿನ ಪ್ರತಿಯೊಂದು ವರ್ಗಕ್ಕಾಗಿ ನಮೂದಿಸಿದ ದರಗಳನ್ನು ಮೀರತಕ್ಕದ್ದಲ್ಲ.

(2) ಹಿಂದೆ ಹೇಳಿದಂತೆ ಅಂಥ ಅಧಿಸೂಚನೆಯನ್ನು ಹೊರಡಿಸಿದ ಹೊರತು ಮತ್ತು ಹೊರಡಿಸುವವರೆಗೆ ಸದರಿ ಅನುಸೂಚಿಯಲ್ಲಿ ನಮೂದಿಸಿರುವ ದರಗಳು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ದರಗಳಾಗಿರತಕ್ಕದ್ದು.

(3) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವ ಅಂಚೆಕಟ್ಟುಗಳನ್ನು ಈ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಪುಸ್ತಕ, ನಮೂನೆ ಅಥವಾ ಮಾದರಿ ಪ್ಯಾಕೆಟ್ಟುಗಳಾಗಿ ಅಂತರ್ದೇಶಿ ಅಂಚೆ ಮೂಲಕ ಕಳುಹಿಸಬಹುದೆಂಬುದನ್ನು ಘೋಷಿಸತಕ್ಕದ್ದು.

8. **ಕೆಲವು ಸಂದರ್ಭಗಳಲ್ಲಿ ಅಂಚೆಹಾಸಲು ಮತ್ತು ಫೀಜುಗಳ ಸಂದಾಯದ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ:**— ಕೇಂದ್ರ ಸರ್ಕಾರವು, ನಿಯಮದ ಮೂಲಕ,—

(ಕ) ಅಂತರ್ದೇಶಿ ಅಂಚೆ ವಸ್ತುಗಳ ಅಥವಾ ಅಂತರ್ದೇಶಿ ಅಂಚೆ ವಸ್ತುಗಳ ಯಾವುದೇ ವರ್ಗದ ಮೇಲೆ ಅಂಚೆ ಹಾಸಲಿನ ಪೂರ್ವ ಸಂದಾಯವನ್ನು ಅಗತ್ಯಪಡಿಸಬಹುದು ಮತ್ತು ಮರುಸಂದಾಯವನ್ನು ಮಾಡತಕ್ಕ ರೀತಿಯನ್ನು ನಿಯಮಿಸಬಹುದು;

(ಖ) ಅಂಚೆಹಾಸಲನ್ನು ಪೂರ್ವಸಂದಾಯ ಮಾಡದಿದ್ದಾಗ ಅಥವಾ ಸಾಕಾಗದಷ್ಟು ಅಂಚೆ ಹಾಸಲನ್ನು ಪೂರ್ವಸಂದಾಯ ಮಾಡಿದ್ದಾಗ ಅಂತರ್ದೇಶಿ ಅಂಚೆವಸ್ತುಗಳ ಮೇಲೆ ವಿಧಿಸಬೇಕಾದ ಅಂಚೆ ಹಾಸಲನ್ನು ನಿಯಮಿಸಬಹುದು;

(ಗ) ಅಂಚೆ ವಸ್ತುಗಳನ್ನು ಪುನರ್ ವಿಳಾಸಿಸುವುದಕ್ಕಾಗಿ ಮತ್ತು ಹಾಗೆ ಪುನರ್ ವಿಳಾಸಿಸಿದ ವಸ್ತುಗಳನ್ನು ಅಂಚೆ ಮೂಲಕ ಉಚಿತವಾಗಿಯಾಗಲಿ ಅಥವಾ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇನ್ನೂ ಹೆಚ್ಚಿನ ವೆಚ್ಚಗಳಿಗೊಳಪಟ್ಟಾಗಲೀ ರವಾನಿಸುವುದಕ್ಕಾಗಿ ಉಪಬಂಧಿಸಬಹುದು ; ಮತ್ತು

(ಘ) ಅಂಚೆ ವಸ್ತುಗಳ "ಶೀಘ್ರ ಬಟವಾಡೆ" ಗಾಗಿ ಈ ಅಧಿನಿಯಮದ ಮೇರೆಗೆ ಅವುಗಳ ಮೇಲೆ ವಿಧಿಸಬಹುದಾದ ಯಾವುದೇ ಇತರ ಅಂಚೆ ಹಾಸಲಿನ ಜೊತೆಗೆ ಅಥವಾ ಅದರ ಬದಲಾಗಿ ವಿಧಿಸಬೇಕಾದ ಫೀಜುಗಳನ್ನು ನಿಯಮಿಸಬಹುದು.

**ವಿವರಣೆ:**– "ಶೀಘ್ರ ಬಟವಾಡೆ" ಎಂದರೆ, ವಿಶೇಷ ಸಂದೇಶ ವಾಹಕನ ಅಥವಾ ವಾಹನದ ಮೂಲಕ ಬಟವಾಡೆ ಎಂದರ್ಥ.

9. **ನೋಂದಾಯಿತ ವೃತ್ತ ಪತ್ರಿಕೆಗಳ ಬಗೆಗೆ ನಿಯಮಗಳನ್ನು ರಚಿಸಲು ಅಧಿಕಾರ:**— (1) ಕೇಂದ್ರ ಸರ್ಕಾರವು ನೋಂದಾಯಿತ ವೃತ್ತ ಪತ್ರಿಕೆಗಳೆಂದು ಅಂತರ್ದೇಶಿ ಅಂಚೆ ಮೂಲಕ ರವಾನಿಸುವುದಕ್ಕಾಗಿ, ವೃತ್ತ ಪತ್ರಿಕೆಗಳ ನೋಂದಣಿಗಾಗಿ ಉಪಬಂಧಿಸುವ ನಿಯಮಗಳನ್ನು ರಚಿಸಬಹುದು.

(2) ಅಂಥ ನೋಂದಣಿಯ ಉದ್ದೇಶಕ್ಕಾಗಿ, ಪೂರ್ಣವಾಗಿ ಅಥವಾ ಹೆಚ್ಚು ಭಾಗ ರಾಜಕೀಯ ಅಥವಾ ಇತರ ಸಮಾಚಾರಗಳನ್ನು ಒಳಗೊಂಡಿರುವ ಪ್ರತಿಯೊಂದು ಪ್ರಕಟಣೆ, ಅಥವಾ ಅದಕ್ಕೆ ಸಂಬಂಧಿಸಿದ ಲೇಖನಗಳು ಅಥವಾ ಜಾಹಿರಾತು ಸಹಿತ ಅಥವಾ ಅದಿಲ್ಲದೆ ಇತರ ಪ್ರಚಲಿತ ವಿಷಯಗಳಿಗೆ ಸಂಬಂಧಿಸಿದ ಪ್ರಕಟಣೆಯನ್ನು, ಕೆಳಕಂಡ ಷರತ್ತುಗಳಿಗೊಳಪಟ್ಟು ವೃತ್ತ ಪತ್ರಿಕೆಯೆಂದು ಭಾವಿಸತಕ್ಕದ್ದು, ಎಂದರೆ:–

(ಕ) **ಅದು ಮೂವತ್ತೊಂದು ದಿವಸಗಳಿಗಿಂತ** ಹೆಚ್ಚಲ್ಲದ ಅಂತರಗಳಲ್ಲಿನ ಸಂಚಿಕೆಗಳಲ್ಲಿ ಪ್ರಕಟವಾಗಿರಬೇಕು; ಮತ್ತು

(ಖ) ಅದು ಚಂದಾದಾರರ ವಾಸ್ತವಿಕ ಪಟ್ಟಿಯನ್ನು ಹೊಂದಿರಬೇಕು.

(3) ವೃತ್ತ ಪತ್ರಿಕೆಯದೇ ದಿನಾಂಕವನ್ನು ಹೊಂದಿರುವ ಮತ್ತು ಅದರೊಂದಿಗೆ ರವಾನಿಸಿದ, ವೃತ್ತಪತ್ರಿಕೆಗೆ ಹೆಚ್ಚಿನದನ್ನು ಅಥವಾ ಪುರವಣಿಯನ್ನು ವೃತ್ತ ಪತ್ರಿಕೆಯ ಭಾಗವೆಂಬುದಾಗಿ ಭಾವಿಸತಕ್ಕುದು:

ಪರಂತು, ಅಂಥ ಯಾವುದೇ ಹೆಚ್ಚಿನದನ್ನು ಅಥವಾ ಪುರವಣಿಯನ್ನು, ಅದು ಪೂರ್ಣವಾಗಿ ಅಥವಾ ಹೆಚ್ಚು ಭಾಗ ವೃತ್ತಪತ್ರಿಕೆಯ ವಿಷಯದಂತಹದನ್ನೇ ಒಳಗೊಂಡಿರುವ ಹೊರತು, ಮತ್ತು ಪ್ರತಿಯೊಂದು ಪುಟದ ಮೇಲ್ಭಾಗದಲ್ಲಿ ಮುದ್ರಿತ ವೃತ್ತಪತ್ರಿಕೆಯ ಪ್ರಕಟಣೆಯ ಶೀರ್ಷಿಕೆ ಮತ್ತು ದಿನಾಂಕವನ್ನು ಹೊಂದಿರುವ ಹೊರತು, ಹಾಗೆ ಭಾವಿಸತಕ್ಕುದಲ್ಲ.

ವಿವರಣೆ:– ಈ ಪ್ರಕರಣದಲ್ಲಿ ಅಥವಾ ಅದರ ಮೇರೆಗಿನ ನಿಯಮಗಳಲ್ಲಿ ಇರುವುದಾವುದೂ, ವೃತ್ತಪತ್ರಿಕೆಗಳನ್ನು ಅಂತರ್ದೇಶಿ ಅಂಚೆ ಮೂಲಕ ಕಳುಹಿಸಲು ಕಡ್ಡಾಯಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

10. **ವಿದೇಶಿ ಅಂಚೆ ಹಾಸಲಿನ ದರಗಳನ್ನು ಘೋಷಿಸಲು ಅಧಿಕಾರ:**—(1) ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ ಅಥವಾ ಅಂಥ ಬ್ರಿಟೀಷ್ ಸ್ವಾಧೀನ ದೇಶ ಅಥವಾ ದೇಶದ ನಡುವೆ ಅಂಚೆ ವಸ್ತುಗಳನ್ನು ಅಂಚೆ ಮೂಲಕ ರವಾನಿಸುವುದಕ್ಕಾಗಿ ಯುನೈಟೆಡ್ ಕಿಂಗ್‌ಡಮ್ ಅಥವಾ ಯಾವುದೇ ಬ್ರಿಟೀಷ್ ಸ್ವಾಧೀನದಲ್ಲಿರುವ ದೇಶದ ಅಥವಾ ವಿದೇಶದೊಂದಿಗೆ ಒಪ್ಪಂದಗಳು ಜಾರಿಯಲ್ಲಿರುವಲ್ಲಿ, ಕೇಂದ್ರ ಸರ್ಕಾರವು ಅಂಥ ಒಪ್ಪಂದಗಳ ಉಪಬಂಧಗಳ ಅನುಸರಣೆಯಲ್ಲಿ ಅಂಥ ಅಂಚೆ ವಸ್ತುಗಳಿಗೆ ಸಂಬಂಧಿಸಿದಂತೆ ಯಾವ ಅಂಚೆ ಹಾಸಲು ದರಗಳನ್ನು ಮತ್ತು ಇತರ ಮೊತ್ತಗಳನ್ನು ವಿಧಿಸತಕ್ಕುದೆಂಬುದನ್ನು ಘೋಷಿಸಬಹುದು ಮತ್ತು ಯಾವ ತೂಕದ ಶ್ರೇಣಿ, ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ದರಗಳನ್ನು ವಿಧಿಸಬಹುದೋ ಆ ತೂಕದ ಶ್ರೇಣಿ, ನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದಂತೆ ಅಂಥ ಘೋಷಣೆಯನ್ನು ಮಾಡಿದ್ದ ಹೊರತು ಮತ್ತು ಅಲ್ಲಿಯವರೆಗೆ, ಅಸ್ತಿತ್ವದಲ್ಲಿರುವ ದರಗಳು ಮತ್ತು ವಿನಿಯಮಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕುದು.

11. **ಅಂಚೆ ಹಾಸಲಿನ ಸಂದಾಯಕ್ಕೆ ಹೊಣೆಗಾರಿಕೆ:**—ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಅಂಚೆ ಹಾಸಲು ಅಥವಾ ಯಾವುದೇ ಇತರ ಮೊತ್ತವು ಬಾಕಿಯಿರುವಲ್ಲಿ, ಅಂಚೆ ವಸ್ತುವಿನ ವಿಳಾಸದಾರನು, ಅಂಚೆ ವಸ್ತುವಿನ ಬಟವಾಡೆಯನ್ನು ಅವನು ಸ್ವೀಕರಿಸುವಾಗ, ಅದನ್ನು ತೆರೆಯದೆ ಕೂಡಲೇ ಹಿಂದಿರುಗಿಸಿದ ಹೊರತು, ಹಾಗೆ ವಿಧಿಸತಕ್ಕ ಅಂಚೆ ಹಾಸಲು ಅಥವಾ ಮೊತ್ತವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕುದು:

ಪರಂತು, ವಿಳಾಸದಾರನಿಗೆ ಕಿರುಕುಳ ಕೊಡುವ ಉದ್ದೇಶಕ್ಕಾಗಿ ದುರ್ಭಾವನೆಯಿಂದ ಯಾವುದೇ ಅಂಥ ಅಂಚೆ ವಸ್ತುವನ್ನು ಕಳುಹಿಸಲಾಗಿದೆಯೆಂದು ಪೋಸ್ಟ್ ಮಾಸ್ಟರ್ ಜನರಲ್‌ಗೆ ಮನದಟ್ಟಾದರೆ, ಅವನು ಅಂಚೆ ಹಾಸಲನ್ನು ಮಾಫಿ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಅಂಚೆ ಹಾಸಲು ಅಥವಾ ಇತರ ಯಾವುದೇ ಮೊತ್ತವು ಬಾಕಿ ಇರುವ ಯಾವುದೇ ಅಂಚೆ ವಸ್ತುವನ್ನು, ಹಿಂದೆ ಹೇಳಿದಂತೆ ನಿರಾಕರಿಸಿದರೆ ಅಥವಾ ಹಿಂತಿರುಗಿಸಿದರೆ ಅಥವಾ ವಿಳಾಸದಾರನು ಮೃತನಾಗಿದ್ದರೆ ಅಥವಾ ಸಿಗದಿದ್ದರೆ, ಆಗ ಕಳುಹಿಸುವವನು ಈ ಅಧಿನಿಯಮದ ಮೇರೆಗೆ ಅದರ ಮೇಲೆ ಬಾಕಿ ಇರುವ ಅಂಚೆ ಹಾಸಲು ಅಥವಾ ಮೊತ್ತವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕುದು.

12. **ಅಂಚೆ ವಸ್ತುಗಳ ಸಂಬಂಧದಲ್ಲಿ ಬಾಕಿ ಇರುವ ಅಂಚೆ ಹಾಸಲು ಮತ್ತು ಇತರ ಮೊತ್ತಗಳ ವಸೂಲಿ:**— ಯಾವನೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಯಾವುದೇ ಅಂಚೆ ವಸ್ತುವಿಗೆ ಸಂಬಂಧಿಸಿದಂತೆ ಅವನಿಂದ ಬಾಕಿ ಇರುವ ಯಾವುದೇ ಅಂಚೆ ಹಾಸಲು ಅಥವಾ ಇತರ ಮೊತ್ತವನ್ನು ಸಂದಾಯ ಮಾಡಲು ನಿರಾಕರಿಸಿದರೆ, ಹಾಗೆ ಬಾಕಿ ಇರುವ ಮೊತ್ತವನ್ನು ಈ ಬಗ್ಗೆ ಪೋಸ್ಟ್ ಮಾಸ್ಟರ್ ಜನರಲ್‌ನ ಬರಹದಲ್ಲಿನ ಆದೇಶದ ಮೂಲಕ ಅಧಿಕೃತನಾದ ಅಂಚೆ ಕಚೇರಿಯ ಅಧಿಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ, ಹಾಗೆ ನಿರಾಕರಿಸುವ ವ್ಯಕ್ತಿಯಿಂದ, ಅಂಚೆ ಇಲಾಖೆಯ ಉಪಯೋಗಕ್ಕಾಗಿ, ಈ ಅಧಿನಿಯಮದ ಮೇರೆಗೆ ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ, ಆ ವ್ಯಕ್ತಿಯು ತತ್ಕಾಲದಲ್ಲಿ ವಾಸಿಸುವ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಯಾವನೇ ಮ್ಯಾಜಿಸ್ಟ್ರೇಟನು ವಸೂಲಿ ಮಾಡಬಹುದು; ಮತ್ತು ಪೋಸ್ಟ್ ಮಾಸ್ಟರ್ ಜನರಲ್‌ನು, ಸರ್ಕಾರಿ ಸೇವೆಯಲ್ಲಿರದ ವ್ಯಕ್ತಿಯು ವಿಳಾಸವಿರುವ ಯಾವುದೇ ಅಂಚೆ ವಸ್ತುವನ್ನು ಹಿಂದೆ ಹೇಳಿದಂತೆ ಅವನಿಂದ ಬಾಕಿ ಇರುವ ಮೊತ್ತವನ್ನು ಸಂದಾಯ ಮಾಡುವ ಅಥವಾ ವಸೂಲ್ಮಾಡುವವರೆಗೆ ತಡೆಹಿಡಿಯತಕ್ಕುದೆಂದು ಇನ್ನೂ ಹೆಚ್ಚಿಗೆ ನಿರ್ದೇಶಿಸಬಹುದು.

13. **ಅಂಚೆ ಕಚೇರಿಯು ಸಂದಾಯ ಮಾಡಿದ ಸೀಮಾ ಸುಂಕವು ಅಂಚೆಯ ಹಾಸಲಿನ ಹಾಗೆ ವಸೂಲೀಯವಾಗತಕ್ಕುದು:**– ಯಾವುದೇ ಸೀಮಾ ಸುಂಕವನ್ನು ಸಂದಾಯ ಮಾಡಬೇಕಾದಂಥ ಅಂಚೆ ವಸ್ತುವನ್ನು, ಭಾರತದ ಪರಿಮಿತಿಗಳಾಚೆಯ ಯಾವುದೇ ಸ್ಥಳದಿಂದ ಅಂಚೆಯ ಮೂಲಕ ಸ್ವೀಕರಿಸಿದರೆ ಮತ್ತು ಸುಂಕವನ್ನು ಅಂಚೆಯ ಪ್ರಾಧಿಕಾರಿಗಳು ಯಾವುದೇ ಸೀಮಾ ಸುಂಕದ ಬಂದರು ಅಥವಾ ಬೇರೆಲ್ಲಿಯಾದರೂ ಸಂದಾಯ ಮಾಡಿದ್ದರೆ, ಸುಂಕದ ಮೊಬಲಗನ್ನು ಈ ಅಧಿನಿಯಮದ ಮೇರೆಗೆ ಬಾಕಿ ಇರುವ ಅಂಚೆ ಹಾಸಲಾಗಿದ್ದರೆ ಹೇಗೋ ಹಾಗೆ, ಅದು ವಸೂಲೀಯವಾಗತಕ್ಕುದು.

14. **ಅಂಚೆ ಕಚೇರಿಯ ಗುರುತುಗಳು ಸೂಚಿಸಿದ ಕೆಲವು ಸಂಗತಿಗಳು ಮೇಲ್ನೋಟದ ಸಾಕ್ಷ್ಯವಾಗಿರತಕ್ಕುದು:**— ಅಂಚೆವಸ್ತುವಿನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಬಾಕಿ ಇರುವುದಾಗಿ ಆರೋಪಿಸಲಾದ ಯಾವುದೇ ಅಂಚೆ ಹಾಸಲು ಅಥವಾ ಇತರ ಮೊತ್ತದ ವಸೂಲಿಗಾಗಿ ಪ್ರತಿಯೊಂದು ವ್ಯವಹರಣೆಯಲ್ಲಿ,—

(ಕ) ಅಂಚೆವಸ್ತುವನ್ನು ನಿರಾಕರಿಸಲಾಗಿದೆ ಅಥವಾ ವಿಳಾಸದಾರನು ಮೃತನಾಗಿದ್ದಾನೆ ಅಥವಾ ಅವನು ಸಿಗಲಿಲ್ಲ ಎಂಬುದನ್ನು ಸೂಚಿಸುವ ಅಂಚೆ ಇಲಾಖೆಯ ಅಧಿಕೃತ ಗುರುತನ್ನು ಅದರ ಮೇಲೆ ಹೊಂದಿರುವ ಅಂಚೆಯ ವಸ್ತುವನ್ನು ಹಾಜರುಪಡಿಸುವುದು, ಹಾಗೆ ಸೂಚಿಸಿದ ಸಂಗತಿಯ ಮೇಲ್ನೋಟದ ಸಾಕ್ಷ್ಯವಾಗಿರತಕ್ಕುದು; ಮತ್ತು

(ಖ) ಯಾವ ವ್ಯಕ್ತಿಯಿಂದ, ಅಂಚೆ ವಸ್ತುವು ಬಂದಿರುವುದಾಗಿ ತಾತ್ಪರ್ಯವಾಗುವುದೋ, ಆ ವ್ಯಕ್ತಿಯನ್ನು, ತದ್ವಿರುದ್ಧವಾದುದು ರುಜುವಾತಾಗುವವರೆಗೆ, ಅದನ್ನು ಕಳುಹಿಸಿರುವವನು ಎಂದು ಭಾವಿಸತಕ್ಕದ್ದು.

**15. ಅಧಿಕೃತ ಗುರುತು ಅಂಚೆ ಹಾಸಲಿನ ಮೊಬಲಗಿನ ಸಾಕ್ಷ್ಯವಾಗಿರತಕ್ಕದ್ದು:**—ಭಾರತದ ಅಂಚೆ ಇಲಾಖೆಗೆ ಅಥವಾ ಯುನೈಟೆಡ್ ಕಿಂಗ್‌ಡಮ್ ಅಥವಾ ಯಾವುದೇ ಬ್ರಿಟಿಷ್ ಸ್ವಾಧೀನದ ದೇಶಕ್ಕೆ ಅಥವಾ ವಿದೇಶದ ಅಂಚೆ ಇಲಾಖೆಗೆ ಸಂಬಂಧಿಸಿದಂತೆ ಬಾಕಿ ಇರುವ ಯಾವುದೇ ಅಂಚೆ ಹಾಸಲು ಅಥವಾ ಇತರ ಮೊತ್ತವನ್ನು ಸೂಚಿಸುವ ಅಂಚೆ ವಸ್ತುವಿನ ಮೇಲಿನ ಅಧಿಕೃತ ಗುರುತು, ಹಿಂದೆ ಹೇಳಿದಂತೆ ಸೂಚಿಸಿದ ಮೊತ್ತವು ಹಾಗೆ ಬಾಕಿ ಇರುವುದರ ಬಗ್ಗೆ ಮೇಲ್ನೋಟದ ಸಾಕ್ಷ್ಯವಾಗಿರತಕ್ಕದ್ದು.

## ಅಧ್ಯಾಯ—IV

### ಅಂಚೆ ಹಾಸಲು ಸ್ಟಾಂಪುಗಳು

**16. ಅಂಚೆ ಹಾಸಲು ಸ್ಟಾಂಪುಗಳನ್ನು ಒದಗಿಸುವುದು ಮತ್ತು ಅವುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸುವ ಅಧಿಕಾರ:**—(1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಯೋಚಿಸುವಂಥ ಬಗೆಯ ಅಂಚೆ ಹಾಸಲು ಸ್ಟಾಂಪುಗಳ ಮತ್ತು ಅಂಥ ಮೌಲ್ಯವನ್ನು ಸೂಚಿಸುವ ಅಂಚೆ ಹಾಸಲು ಸ್ಟಾಂಪುಗಳನ್ನು ಒದಗಿಸುವಂತೆ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು ಅಂಚೆ ಹಾಸಲು ಸ್ಟಾಂಪುಗಳ ಸರಬರಾಜು, ಮಾರಾಟ ಮತ್ತು ಉಪಯೋಗದ ಬಗ್ಗೆ ನಿಯಮಗಳನ್ನು ರಚಿಸಬಹುದು.

(3) ವಿಶೇಷವಾಗಿ ಮತ್ತು ಹಿಂದೆ ಹೇಳಿದಂಥ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) ಅಂಚೆ ಹಾಸಲು ಸ್ಟಾಂಪುಗಳನ್ನು ಮಾರತಕ್ಕಂಥ ಬೆಲೆಯನ್ನು ನಿಗದಿಪಡಿಸಬಹುದು ;

(ಖ) ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಅಂಚೆ ಹಾಸಲು ಅಥವಾ ಇತರ ಮೊತ್ತದ ಸಂದಾಯಕ್ಕಾಗಿ ಉಪಯೋಗಿಸತಕ್ಕ ಅಂಚೆ ಹಾಸಲು ಸ್ಟಾಂಪುಗಳ ಸಂಬಂಧದಲ್ಲಿ ಅಂಚೆ ವಸ್ತುಗಳ ವರ್ಗಗಳನ್ನು ಘೋಷಿಸಬಹುದು;

(ಗ) ಅಂಚೆ ಹಾಸಲು ಅಥವಾ ಇತರ ಮೊತ್ತವನ್ನು ಸಂದಾಯ ಮಾಡುವಲ್ಲಿ ಯಾವ ಸಾಲುರಂಧ್ರ ಮಾಡುವಿಕೆ, ವಿರೂಪಗೊಳಿಸುವಿಕೆ ಮತ್ತು ಎಲ್ಲ ಇತರ ವಿಷಯಗಳಿಗೆ ಒಳಪಟ್ಟು ಅಂಚೆ ಹಾಸಲು ಸ್ಟಾಂಪುಗಳನ್ನು ಅಂಗೀಕರಿಸಬಹುದೋ ಅಥವಾ ನಿರಾಕರಿಸಬಹುದೋ ಆ ಸಾಲುರಂಧ್ರ ಮಾಡುವಿಕೆ, ವಿರೂಪಗೊಳಿಸುವಿಕೆ ಮತ್ತು ಎಲ್ಲ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಷರತ್ತುಗಳನ್ನು ನಿಯಮಿಸಬಹುದು;

(ಘ) ಅಂಚೆ ಹಾಸಲು ಸ್ಟಾಂಪುಗಳ ಅಭಿರಕ್ಷೆ, ಸರಬರಾಜು ಮತ್ತು ಮಾರಾಟವನ್ನು ನಿಯಂತ್ರಿಸಬಹುದು;

(ಙ) ಯಾವ ವ್ಯಕ್ತಿಗಳು ಮತ್ತು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಅಂಚೆ ಹಾಸಲು ಸ್ಟಾಂಪುಗಳನ್ನು ಮಾರಾಟ ಮಾಡಬೇಕೆಂಬುದನ್ನು ಘೋಷಿಸಬಹುದು; ಮತ್ತು

(ಚ) ಅಂಚೆ ಸ್ಟಾಂಪುಗಳನ್ನು ಮಾರಾಟ ಮಾಡುವ ವ್ಯಕ್ತಿಗಳ ಕರ್ತವ್ಯಗಳು ಮತ್ತು ಅವರ ಸಂಭಾವನೆಯನ್ನು ನಿಯಮಿಸಬಹುದು.

**17. ರಾಜಸ್ವದ ಉದ್ದೇಶಕ್ಕಾಗಿ ಅಂಚೆ ಹಾಸಲು ಸ್ಟಾಂಪುಗಳನ್ನು ಸ್ಟಾಂಪುಗಳು ಎಂಬುದಾಗಿ ಭಾವಿಸತಕ್ಕದ್ದು:**—(1) 16ನೇ ಪ್ರಕರಣದ ಮೇರೆಗೆ ಒದಗಿಸಿದ ಅಂಚೆ ಹಾಸಲು ಸ್ಟಾಂಪುಗಳನ್ನು, ಭಾರತ ದಂಡಸಂಹಿತೆ (1860ರ 45)ಯ ಅರ್ಥವ್ಯಾಪ್ತಿಯೊಳಗೆ ಆದಾಯದ ಉದ್ದೇಶಕ್ಕಾಗಿ ಸರ್ಕಾರವು ಹೊರಡಿಸಿದ ಸ್ಟಾಂಪುಗಳೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಅವುಗಳನ್ನು, ಕೇಂದ್ರ ಸರ್ಕಾರವು ಪೂರ್ವ ಸಂದಾಯವನ್ನು ಬೇರೆ ರೀತಿಯಲ್ಲಿ ಮಾಡಬೇಕೆಂದು ನಿರ್ದೇಶಿಸುವ ಹೊರತು ಅಂಚೆ ವಸ್ತುಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಅಂಚೆ ಹಾಸಲು ಮತ್ತು ಇತರ ಮೊತ್ತಗಳ ಪೂರ್ವ ಸಂದಾಯಕ್ಕಾಗಿ ಉಪಯೋಗಿಸತಕ್ಕದ್ದು.

(2) ಕೇಂದ್ರ ಸರ್ಕಾರವು ಅಂಚೆ ವಸ್ತುಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಅಂಚೆ ಹಾಸಲು ಅಥವಾ ಇತರ ಮೊತ್ತದ ಪೂರ್ವ ಸಂದಾಯವನ್ನು ಕೇಂದ್ರ ಸರ್ಕಾರವು, ಅದನ್ನು ಅದರ ಅಧಿಕಾರದ ಮೇರೆಗೆ ಕೊಟ್ಟ ಸ್ಟಾಂಪು ಹಾಕುವ ಯಂತ್ರಗಳ ಮುದ್ರೆಗಳ ಮೂಲಕ ಸೂಚಿಸಿದ ಮೌಲ್ಯವನ್ನು ಪೂರ್ವ ಸಂದಾಯ ಮಾಡುವುದರ ಮೂಲಕ ಮಾಡಬಹುದೆಂದು ನಿರ್ದೇಶಿಸಿರುವಲ್ಲಿ, ಯಾವುದೇ ಅಂಥ ಯಂತ್ರದ ಮುದ್ರೆಯನ್ನು ಭಾರತ ದಂಡ ಸಂಹಿತೆ (1860ರ 45)ಯ ಅರ್ಥವ್ಯಾಪ್ತಿಯೊಳಗೆ ಆದಾಯದ ಉದ್ದೇಶಕ್ಕಾಗಿ ಸರ್ಕಾರವು ಹೊರಡಿಸಿದ ಸ್ಟಾಂಪು ಎಂದು ಅದೇ ರೀತಿ ಭಾವಿಸತಕ್ಕದ್ದು.

## ಅಧ್ಯಾಯ—V

### ಅಂಚೆ ವಸ್ತುಗಳ ರವಾನೆಯ ಷರತ್ತುಗಳು

**18.** ಅಂಚೆಯ ಮೂಲಕ ರವಾನೆಯ ಕ್ರಮದಲ್ಲಿ ಅಂಚೆ ವಸ್ತುವನ್ನು ಕಳುಹಿಸಿರುವವನಿಗೆ ಮರು ಬಟವಾಡೆ:— (1) ಕೇಂದ್ರ ಸರ್ಕಾರವು, ಯಾವುದೇ ಅಂಚೆಯ ವಸ್ತುವನ್ನು ಅಂಚೆ ಮೂಲಕ ರವಾನಿಸುವ ಪತ್ರದಲ್ಲಿ ವಿಳಾಸದಾರನ ಒಪ್ಪಿಗೆಗೆ ಉಲ್ಲೇಖಿಸದೆ ಮತ್ತು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳು (ಯಾವುವಾದರೂ ಇದ್ದರೆ) ಅವುಗಳಿಗೊಳಪಟ್ಟು, ಕಳುಹಿಸಿರುವವನಿಗೆ ಪುನಃ ಬಟವಾಡೆ ಮಾಡುವುದಕ್ಕಾಗಿ ನಿಯಮದ ಮೂಲಕ ಉಪಬಂಧಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ರಚಿಸಬಹುದಾದಂಥ ಯಾವುದೇ ನಿಯಮದಲ್ಲಿ ಉಪಬಂಧಿಸಿರುವಂತೆ ಹೊರತು ಅಂಚೆಯ ಮೂಲಕ ರವಾನೆಯ ಕ್ರಮದಲ್ಲಿ ಅಂಚೆಯ ವಸ್ತುವನ್ನು ಹಿಂದಕ್ಕೆ ತರಿಸಿಕೊಳ್ಳಲು ಕಳುಹಿಸಿರುವವನು ಹಕ್ಕುದಾರನಾಗಿರತಕ್ಕುದಲ್ಲ.

**19.** ಅಂಚೆಯ ಮೂಲಕ ಯಾವುದೇ ಹಾನಿಕರ ವಸ್ತುವನ್ನು ರವಾನಿಸುವುದರ ಮೇಲೆ ನಿಷೇಧ:—(1) ನಿಯಮದ ಮೂಲಕ ಅನ್ಯಥಾ ಉಪಬಂಧಿಸಬಹುದಾದಂತೆ ಹೊರತು ಮತ್ತು ಆ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಯಾವನೇ ವ್ಯಕ್ತಿಯು ಅಂಚೆಯ ಮೂಲಕ ಅಂಚೆಯ ವಸ್ತುಗಳನ್ನು ಕಳುಹಿಸಿಕೊಡುವ ಕಾಲದಲ್ಲಿ ಅವುಗಳಿಗೆ ಅಥವಾ ಅಂಚೆ ಕಚೇರಿಯ ಯಾವನೇ ಅಧಿಕಾರಿಗೆ ಹಾನಿಯುಂಟು ಮಾಡುವ ಸಂಭವವಿರುವ ಯಾವುದೇ ಸ್ಫೋಟಕವಾದ, ಅಪಾಯಕಾರಿಯಾದ, ಕೊಳಕಾದ, ಅಸಹ್ಯಕರವಾದ ಅಥವಾ ಹಾನಿಕರವಾದ ವಸ್ತುವನ್ನು, ಸರಿಯಾಗಿ ರಕ್ಷಿತವಲ್ಲದ ಯಾವುದೇ ಹರಿತವಾದ ಉಪಕರಣವನ್ನು, ಅಥವಾ ಅಸಹ್ಯಕರವಾದ ಅಥವಾ ಹಾನಿಯುಂಟು ಮಾಡುವ ಯಾವುದೇ ಜೀವ ಜಂತುವನ್ನು ಕಳುಹಿಸತಕ್ಕುದಲ್ಲ.

(2) ಯಾವನೇ ವ್ಯಕ್ತಿಯು ಅಂಚೆಯ ವಸ್ತುಗಳನ್ನು ರವಾನಿಸುವ ಕ್ರಮದಲ್ಲಿ ಅವುಗಳಿಗೆ ಅಥವಾ ಅಂಚೆ ಇಲಾಖೆಯ ಯಾವನೇ ಅಧಿಕಾರಿಗೆ ಹಾನಿ ಉಂಟು ಮಾಡುವ ಸಂಭವವಿರುವ ಯಾವುದೇ ವಸ್ತು ಅಥವಾ ಪದಾರ್ಥವನ್ನು ಅಂಚೆಯ ಮೂಲಕ ಕಳುಹಿಸತಕ್ಕುದಲ್ಲ.

**19ಕ.** ಅನಧಿಕೃತ ಲಾಟರಿಗಳಿಗೆ ಸಂಬಂಧಿಸಿದ ಟಿಕೇಟುಗಳು, ಪ್ರಸ್ತಾವಗಳು, ಇತ್ಯಾದಿಗಳನ್ನು ಅಂಚೆಯ ಮೂಲಕ ರವಾನಿಸುವುದರ ಬಗ್ಗೆ ನಿಷೇಧ :—ಯಾವ ವ್ಯಕ್ತಿಯು, ಅಂಚೆಯ ಮೂಲಕ—

(ಕ) ಲಾಟರಿಗೆ ಸಂಬಂಧಿಸಿದ ಯಾವುದೇ ಟಿಕೇಟು, ಪ್ರಸ್ತಾವ ಅಥವಾ ಜಾಹೀರಾತನ್ನು ; ಅಥವಾ

(ಖ) ಲಾಟರಿಯಲ್ಲಿ ಭಾಗವಹಿಸಲು ವ್ಯಕ್ತಿಗಳನ್ನು ಪುಸಲಾಯಿಸುವ ಹಾಗೆ ಕಾರ್ಯ ನಿರ್ವಹಿಸುವುದಕ್ಕಾಗಿ ಲೆಕ್ಕ ಹಾಕಿದಂಥ ಲಾಟರಿಯನ್ನು ವರ್ಣಿಸುವ ಅಥವಾ ಅನ್ಯಥಾ ಅದಕ್ಕೆ ಸಂಬಂಧಿಸಿದ ಯಾವುದೇ ಇತರ ಪದಾರ್ಥವನ್ನು

—ಕಳುಹಿಸತಕ್ಕುದಲ್ಲ.

**ವಿವರಣೆ.**—ಈ ಪ್ರಕರಣದಲ್ಲಿ "ಲಾಟರಿ" ಎಂಬುದು ಸರ್ಕಾರವು ನಡೆಸುವ ಅಥವಾ ಅದು ಅಧಿಕೃತಗೊಳಿಸುವ ಲಾಟರಿಯನ್ನು ಒಳಗೊಳ್ಳುವುದಿಲ್ಲ.

**20.** ಅಸಭ್ಯವಾದ ಯಾವುದೇ ವಸ್ತು, ಇತ್ಯಾದಿಯನ್ನು ಅಂಚೆಯ ಮೂಲಕ ರವಾನಿಸುವುದರ ಮೇಲೆ ನಿಷೇಧ:— ಯಾವನೇ ವ್ಯಕ್ತಿಯು ಅಂಚೆಯ ಮೂಲಕ,—

(ಕ) ಯಾವುದೇ ಅಸಭ್ಯ ಅಥವಾ ಅಶ್ಲೀಲ ಮುದ್ರಣ, ರೇಖಾಚಿತ್ರ, ಛಾಯಾಚಿತ್ರ, ಕಲ್ಲಚ್ಚು, ಕೆತ್ತನೆ, ಪುಸ್ತಕ ಅಥವಾ ಕಾರ್ಡನ್ನು ಅಥವಾ ಇತರ ಯಾವುದೇ ಅಸಭ್ಯ ಅಥವಾ ಅಶ್ಲೀಲ ವಸ್ತುವನ್ನು ; ಅಥವಾ

(ಖ) ಅಸಭ್ಯ, ಅಶ್ಲೀಲ, ರಾಜದ್ರೋಹಾತ್ಮಕ, ದುರ್ಭಾಷೆಯ, ಹೆದರಿಸುವ ಅಥವಾ ಸಂಪೂರ್ಣವಾಗಿ ಅಪರಾಧ ಸ್ವರೂಪದ ಯಾವುವೇ ಶಬ್ದಗಳು, ಗುರುತುಗಳು ಅಥವಾ ಮಾದರಿಗಳನ್ನು ಅವುಗಳ ಮೇಲೆ ಅಥವಾ ಅವುಗಳ ಹೊದಿಕೆಯ ಮೇಲೆ ಹೊಂದಿರುವ ಯಾವುದೇ ಅಂಚೆ ವಸ್ತುವನ್ನು

—ಕಳುಹಿಸತಕ್ಕುದಲ್ಲ.

**21.** ಅಂಚೆಯ ವಸ್ತುಗಳನ್ನು ಅಂಚೆಯ ಮೂಲಕ ರವಾನಿಸುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ಅಧಿಕಾರ:—(1) ಕೇಂದ್ರ ಸರ್ಕಾರವು ಅಂಚೆಯ ವಸ್ತುಗಳನ್ನು ಅಂಚೆಯ ಮೂಲಕ ರವಾನಿಸುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) ಅಂಚೆಯ ಮೂಲಕ ಕಳುಹಿಸಬಾರದಂಥ ವಸ್ತುಗಳನ್ನು ನಿರ್ದಿಷ್ಟಪಡಿಸಬಹುದು ;

(ಖ) ಯಾವ ಷರತ್ತುಗಳ ಮೇಲೆ ವಸ್ತುಗಳನ್ನು ಅಂಚೆಯ ಮೂಲಕ ರವಾನಿಸಬಹುದೋ ಆ ಷರತ್ತುಗಳನ್ನು ನಿಯಮಿಸಬಹುದು ;

(ಗ) (ಕ) ಖಂಡ ಅಥವಾ (ಖ) ಖಂಡದ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ, ಅಂಚೆಯ ಮೂಲಕ ರವಾನಿಸುವ ಕ್ರಮದಲ್ಲಿ ವಸ್ತುಗಳನ್ನು ತಡೆಹಿಡಿಯುವುದಕ್ಕೆ ಮತ್ತು ವಿಲೆ ಮಾಡುವುದಕ್ಕಾಗಿ ಉಪಬಂಧಿಸಬಹುದು;

(ಘ) ಅಂಚೆ ವಸ್ತುಗಳನ್ನು ಅಂಚೆಗೆ ಹಾಕುವ ಮತ್ತು ಬಟವಾಡೆ ಮಾಡುವ ಬಗ್ಗೆ ರಸೀದಿಯನ್ನು ಕೊಡುವುದಕ್ಕಾಗಿ ಮತ್ತು ಅಂಚೆಗೆ ಹಾಕಿದ್ದರ ಪ್ರಮಾಣ ಪತ್ರವನ್ನು ಕೊಡುವ ಮತ್ತು ಪಡೆಯುವ ಬಗ್ಗೆ, ಮತ್ತು ಅಂಥ ರಸೀದಿಗಳು ಮತ್ತು ಪ್ರಮಾಣ ಪತ್ರಗಳಿಗಾಗಿ ಇತರ ಯಾವುದೇ ಅಂಚೆಯ ಹಾಸಲಿನ ಜೊತೆಗೆ ಸಂದಾಯ ಮಾಡಬೇಕಾದ ಮೊತ್ತಗಳಿಗಾಗಿ ಉಪಬಂಧಿಸಬಹುದು ; ಮತ್ತು

(ಙ) ಲಕೋಟೆ, ನಮೂನೆಗಳು, ಉದ್ದಗಲಗಳು, ಗರಿಷ್ಠ ತೂಕಗಳು ಮತ್ತು ಒಳ ಅಳವಡಿಕೆಗಳು ಮತ್ತು ಸುದ್ದಿಯನ್ನು ತಲುಪಿಸುವುದಕ್ಕಾಗಿ ಪತ್ರಗಳನ್ನು ಹೊರತುಪಡಿಸಿ, ಅಂಚೆ ವಸ್ತುಗಳ ಉಪಯೋಗವನ್ನು ವಿನಿಯಮಿಸಬಹುದು.

(3) ಅಂಚೆಯ ವಸ್ತುಗಳನ್ನು, ಮಹಾ ನಿರ್ದೇಶಕನು ಆಗಿಂದಾಗ್ಗೆ ಗೊತ್ತುಪಡಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ರೀತಿಯಲ್ಲಿ ಅಂಚೆಗೆ ಹಾಕತಕ್ಕದ್ದು ಮತ್ತು ಬಟವಾಡೆ ಮಾಡತಕ್ಕದ್ದು.

**22. ಕೆಲವು ಅಂಚೆ ವಸ್ತುಗಳ ರವಾನೆ ಅಥವಾ ಬಟವಾಡೆಯನ್ನು ಮುಂದೂಡುವ ಅಧಿಕಾರ:**—(1) ಅಂಚೆ ಕಛೇರಿಯಿಂದ ಅದೇ ಕಾಲದಲ್ಲಿ ಪುಸ್ತಕ, ನಮೂನೆ ಅಥವಾ ಮಾದರಿ ಪ್ಯಾಕೆಟ್ಟುಗಳು ಮತ್ತು ಭಾಂಗಿಗಳು ಅಥವಾ ಅವುಗಳಲ್ಲಿ ಯಾವುದನ್ನೇ ಆಗಲಿ ರವಾನಿಸುವ ಅಥವಾ ಬಟವಾಡೆ ಮಾಡುವ ಮೂಲಕ ಪತ್ರಗಳ ರವಾನೆ ಅಥವಾ ಬಟವಾಡೆಯು ವಿಳಂಬವಾಗುವಲ್ಲಿ, ಅಂಥ ಪ್ಯಾಕೆಟ್ಟುಗಳನ್ನು ಅಥವಾ ಭಾಂಗಿಗಳನ್ನು ಅಥವಾ ಅವುಗಳಲ್ಲಿ ಯಾವುದನ್ನೇ ಆಗಲಿ ಒಂದನ್ನು ಕೇಂದ್ರ ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಅವಶ್ಯಕವಾಗಬಹುದಾದಷ್ಟು ಅವಧಿಯವರೆಗೆ ಅಂಚೆ ಇಲಾಖೆಯಲ್ಲಿ ತಡೆಹಿಡಿದಿಟ್ಟುಕೊಳ್ಳಬಹುದು.

(2) ಪ್ರತ್ಯೇಕ ಭಾಂಗಿ ಸ್ಥಳಗಳನ್ನು ಸ್ಥಾಪಿಸಿರುವಲ್ಲಿ, ಅವಶ್ಯವಾದರೆ, ಆ ಉದ್ದೇಶಕ್ಕಾಗಿ ಅಂಚೆ ಇಲಾಖೆಯಲ್ಲಿ ತಡೆಹಿಡಿದಿಟ್ಟಿರುವ ಭಾಂಗಿಗಳನ್ನು ಅವುಗಳ ಮೂಲಕ ಕಳುಹಿಸಬಹುದು ಮತ್ತು ಸಾಗಿಸಬಹುದು.

**23. ಈ ಅಧಿನಿಯಮವನ್ನು ಉಲ್ಲಂಘಿಸಿ ಅಂಚೆಗೆ ಹಾಕಿದ ಅಂಚೆ ವಸ್ತುಗಳೊಂದಿಗೆ ವ್ಯವಹರಿಸುವ ಅಧಿಕಾರ:**—. ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಅಂಚೆಯ ಮೂಲಕ ಕಳುಹಿಸಿದ ಯಾವುದೇ ಅಂಚೆ ವಸ್ತುವನ್ನು ತಡೆಹಿಡಿದಿರಿಸಬಹುದು ಮತ್ತು ಕೇಂದ್ರ ಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂಥ ಹೆಚ್ಚಿನ ಅಂಚೆ ಹಾಸಲು (ಯಾವುದಾದರೂ ಇದ್ದರೆ) ಅದನ್ನು ಪ್ರತಿಯೊಂದು ಸಂದರ್ಭದಲ್ಲಿ ವಿಧಿಸಿ, ಕಳುಹಿಸಿದವನಿಗೆ ಹಿಂದಿರುಗಿಸಬಹುದು ಅಥವಾ ಗಮ್ಯಸ್ಥಾನಕ್ಕೆ ಕಳುಹಿಸಬಹುದು.

(2) ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಥವಾ ಈ ಬಗ್ಗೆ ಪೋಸ್ಟ್ ಮಾಸ್ಟರ್ ಜನರಲ್ಲನು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು 20ನೇ ಪ್ರಕರಣದ (ಕ) ಖಂಡದ ಅಥವಾ 21ನೇ ಪ್ರಕರಣದ ಅಥವಾ ಅಂಚೆ ಹಾಸಲಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಅಂಚೆಯ ಮೂಲಕ ಕಳುಹಿಸಲಾಗಿದೆ ಎಂದು ಅವನು ಶಂಕಿಸುವಂಥ ಯಾವುದೇ ವೃತ್ತಪತ್ರಿಕೆ ಅಥವಾ ಯಾವುದೇ ಪುಸ್ತಕ, ನಮೂನೆ ಅಥವಾ ಮಾದರಿ ಪ್ಯಾಕೆಟ್ಟನ್ನು ತೆರೆಯಬಹುದು ಅಥವಾ ಬಿಚ್ಚಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ—

(ಕ) 19ನೇ ಪ್ರಕರಣ ಅಥವಾ 19ಕ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಂಚೆಯ ಮೂಲಕ ಕಳುಹಿಸಿದ ಯಾವುದೇ ಅಂಚೆ ವಸ್ತುವನ್ನು, ಅವಶ್ಯವಿದ್ದರೆ, ಪೋಸ್ಟ್‌ಮಾಸ್ಟರ್ ಜನರಲ್ಲನ ಅಧಿಕಾರದ ಮೇರೆಗೆ ತೆರೆಯಬಹುದು ಮತ್ತು ನಾಶಪಡಿಸಬಹುದು; ಮತ್ತು

(ಖ) 20ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಂಚೆಯ ಮೂಲಕ ಕಳುಹಿಸಿದ ಯಾವುದೇ ಅಂಚೆ ವಸ್ತುವನ್ನು, ಕೇಂದ್ರ ಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

**24. ನಿಷಿದ್ಧ ಅಥವಾ ಸುಂಕಕ್ಕೆ ಗುರಿಯಾಗುವ ಸರಕುಗಳನ್ನು ಒಳಗೊಂಡಿರುವ ಅಂಚೆ ವಸ್ತುಗಳೊಂದಿಗೆ ವ್ಯವಹರಿಸುವ ಅಧಿಕಾರ:**—ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೂಲಕ ಅಥವಾ ಅದರ ಮೇರೆಗೆ ಅಂಚೆಯ ಮೂಲಕ ಆಮದು ಮಾಡಿಕೊಳ್ಳಲು ಅಥವಾ ಅಂಚೆಯ ಮೂಲಕ ರವಾನಿಸಲು ನಿಷೇಧಿಸಿದಂಥ ಯಾವುವೇ ಸರಕುಗಳನ್ನು ಅಂಚೆ ವಸ್ತುವು ಒಳಗೊಂಡಿದೆಯೆಂದು ಶಂಕಿಸುವ ಅಥವಾ ಸುಂಕಕ್ಕೆ ಗುರಿಯಾಗುವ ಯಾವುದನ್ನೇ ಆದರೂ ಅಂಚೆ ಕಚೇರಿಯಲ್ಲಿ ಬಟವಾಡೆಗಾಗಿ ಸ್ವೀಕರಿಸಿರುವಲ್ಲಿ, ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಯು, ಖುದ್ದಾಗಿ ಅಥವಾ ಏಜೆಂಟನ ಮೂಲಕ ಅಂಚೆ ಕಚೇರಿಯಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅವನು ಹಾಜರಾಗುವಂತೆ ವಿಳಾಸದಾರನಿಗೆ ಬರಹದಲ್ಲಿನ ನೋಟೀಸನ್ನು ಕಳುಹಿಸತಕ್ಕದ್ದು ಮತ್ತು ವಿಳಾಸದಾರನ ಅಥವಾ ಅವನ ಏಜಂಟನ ಸಮಕ್ಷಮದಲ್ಲಿ, ಅಥವಾ ಹಿಂದೆ ಹೇಳಿದಂತೆ ವಿಳಾಸದಾರ ಅಥವಾ ಅವನ ಏಜೆಂಟನು ಹಾಜರಾಗಲು ತಪ್ಪಿದರೆ, ಅವನ ಗೈರು ಹಾಜರಿಯಲ್ಲಿ ಅಂಚೆ ವಸ್ತುವನ್ನು ತೆರೆಯತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು:

ಪರಂತು, ಮೊದಲನೆಯದಾಗಿ, ಯಾವುದೇ ಅಂಚೆ ಕಚೇರಿ ಅಥವಾ ಅಂಚೆ ಕಚೇರಿಗಳ ವರ್ಗದ ಸಂದರ್ಭದಲ್ಲಿ ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಯು, ವಿಳಾಸದಾರ ಅಥವಾ ಅವನ ಏಜೆಂಟನ ಗೈರು ಹಾಜರಿಯಲ್ಲಿ ತಾನು ಅಂಚೆಯ ವಸ್ತುವನ್ನು ತೆರೆಯುವುದಕ್ಕೆ ಮುಂಚೆ ಸಾಕ್ಷಿದಾರರಾಗಿ ಇಬ್ಬರು ಗೌರವಾನ್ವಿತ ವ್ಯಕ್ತಿಗಳನ್ನು ಕರೆಯತಕ್ಕದ್ದೆಂದು ಮಹಾ ನಿರ್ದೇಶಕನು ಹಾಗೆ ನಿರ್ದೇಶಿಸಿದರೆ, ಅವನು ಹಾಗೆ ಕರೆಯತಕ್ಕದ್ದು:

ಪರಂತು, ಎರಡನೆಯದಾಗಿ, ಎಲ್ಲ ಸಂದರ್ಭಗಳಲ್ಲಿ ಅಂಚೆಯ ವಸ್ತುವನ್ನು ಈ ಪ್ರಕರಣದ ಮೇರೆಗೆ ತೆರೆದ ತರುವಾಯ ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಇತರ ಕಾನೂನು ಅಥವಾ ಅಧಿನಿಯಮಿತಿಯ ಮೇರೆಗೆ ಇನ್ನೂ ಹೆಚ್ಚಿನ ವ್ಯವಹರಣೆಯ ಉದ್ದೇಶಕ್ಕಾಗಿ ಅದು ಅಗತ್ಯವಿದ್ದ ಹೊರತು ವಿಳಾಸದಾರನಿಗೆ ಬಟವಾಡೆ ಮಾಡತಕ್ಕದ್ದು, ಮತ್ತು ಅಂಚೆಯ ವಸ್ತುವನ್ನು ತೆರೆದ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಸಂದರ್ಭಗಳನ್ನು ಕೂಡಲೇ ಪೋಸ್ಟ್ ಮಾಸ್ಟರ್ ಜನರಲ್ಲನಿಗೆ ವರದಿ ಮಾಡತಕ್ಕದ್ದು.

**24ಕ. ಅಂಥ ವಸ್ತುಗಳನ್ನು ಸೀಮಾ ಸುಂಕ ಪ್ರಾಧಿಕಾರಿಗೆ ವಶಾವಣೆ ಮಾಡಲು ಅಧಿಕಾರ:**—ಕೇಂದ್ರ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿದ, ಅಂಚೆ ಇಲಾಖೆಯ ಯಾವನೇ ಅಧಿಕಾರಿಯನ್ನು, ಭಾರತದ ಪರಿಮಿತಿಗಳಿಂದಾಚೆಯಿಂದ ಸ್ವೀಕರಿಸಿದ ಮತ್ತು ಸುಂಕಕ್ಕೆ ಗುರಿಯಾಗಬಹುದಾದ ಯಾವುದ

ನ್ನಾದರೂ ಒಳಗೊಂಡಿದೆಯೆಂದು ಶಂಕಿಸುವ ಯಾವುದೇ ಅಂಚೆಯ ವಸ್ತುವನ್ನು ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೀಮಾ ಸುಂಕ ಪ್ರಾಧಿಕಾರಿಗೆ ವಶಾವಣೆ ಮಾಡಲು ಶಕ್ತಗೊಳಿಸಬಹುದು, ಮತ್ತು ಅಂಥ ಸೀಮಾ ಸುಂಕ ಪ್ರಾಧಿಕಾರಿಯು 1878ರ ಸಮುದ್ರ ಸೀಮಾ ಸುಂಕ ಅಧಿನಿಯಮ (1878ರ 8) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಅಂಥ ವಸ್ತುಗಳೊಡನೆ ವ್ಯವಹರಿಸತಕ್ಕದು.

25. **ಅಂಚೆಯ ಮೂಲಕ ಕಳುಹಿಸಲಾದ ಅಧಿಸೂಚಿತ ಸರಕುಗಳನ್ನು ತಡೆಗಟ್ಟುವ ಅಧಿಕಾರ** :—ಯಾವುದೇ ನಿರ್ದಿಷ್ಟಪಡಿಸಿದ ವಿವರಣೆಯ ಯಾವುವೇ ಸರಕುಗಳಿಗೆ ಸಂಬಂಧಿಸಿದಂತೆ, 1878ರ ಸಮುದ್ರ ಸೀಮಾ ಸುಂಕ ಅಧಿನಿಯಮ (1878ರ 8)ದ 19ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿರುವಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಯ ಮೂಲಕ ಅಥವಾ ಅದರ ಮೇರೆಗೆ ಯಾವುದೇ ನಿರ್ದಿಷ್ಟಪಡಿಸಿದ ವಿವರಣೆಯ ಸರಕುಗಳನ್ನು ಭಾರತದೊಳಗೆ ಅಥವಾ ಭಾರತದಿಂದ ಆಮದು ಅಥವಾ ರಫ್ತನ್ನು ನಿಷೇಧಿಸಿರುವಲ್ಲಿ ಅಥವಾ ಪರಿಬಂಧಿಸಿರುವಲ್ಲಿ, ಈ ಬಗ್ಗೆ ಕೇಂದ್ರ ಸರ್ಕಾರವು ಶಕ್ತಗೊಳಿಸಿದ ಅಂಚೆ ಇಲಾಖೆಯ ಯಾವನೇ ಅಧಿಕಾರಿಯು, ಅಂಚೆಯ ಮೂಲಕ ಕಳುಹಿಸುವಾಗ ಅಂಥ ಯಾವುವೇ ಸರಕುಗಳಿಗಾಗಿ ಶೋಧಿಸಬಹುದು, ಅಥವಾ ಶೋಧಿಸುವಂತೆ ಮಾಡಬಹುದು. ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಂಥ ಅಧಿಕಾರಿಗೆ, ಅಂಥ ಸರಕುಗಳನ್ನೊಳಗೊಂಡಿದೆಯೆಂದು ಯುಕ್ತವಾಗಿ ನಂಬುವ ಅಥವಾ ಕಂಡುಬರುವ ಎಲ್ಲ ಅಂಚೆ ವಸ್ತುಗಳನ್ನು ವಶಾವಣೆ ಮಾಡತಕ್ಕದು. ಮತ್ತು ಅಂಥ ಸರಕುಗಳನ್ನು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು. ಅಂಥ ಯಾವುದೇ ಶೋಧನೆಯನ್ನು ಮಾಡುವಲ್ಲಿ ಅಂಚೆ ಇಲಾಖೆಯ ಅಂಥ ಅಧಿಕಾರಿಯು, ಅಂಚೆಯ ಮೂಲಕ ಕಳುಹಿಸುವಾಗ ಯಾವುದೇ ವೃತ್ತಪತ್ರಿಕೆ, ಅಥವಾ ಯಾವುದೇ ಪುಸ್ತಕ, ಯಾವುದೇ ನಮೂನೆ ಅಥವಾ ಮಾದರಿ ಪ್ಯಾಕೆಟ್ಟನ್ನು ತೆರೆಯಬಹುದು ಅಥವಾ ಬಿಚ್ಚಬಹುದು, ಅಥವಾ ತೆರೆಯುವಂತೆ ಮಾಡಬಹುದು ಅಥವಾ ಬಿಚ್ಚುವಂತೆ ಮಾಡಬಹುದು.

26. **ಸಾರ್ವಜನಿಕ ಒಳಿತಿಗಾಗಿ ಅಂಚೆಯ ವಸ್ತುಗಳನ್ನು ತಡೆಗಟ್ಟಲು ಅಧಿಕಾರ**:— (1) ಯಾವುದೇ ಸಾರ್ವಜನಿಕ ತುರ್ತುಪರಿಸ್ಥಿತಿ ಸಂಭವಿಸಿದಾಗ, ಅಥವಾ ಸಾರ್ವಜನಿಕ ಸುರಕ್ಷೆ ಅಥವಾ ನೆಮ್ಮದಿಯ ಹಿತದೃಷ್ಟಿಯಿಂದ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ವಿಶೇಷವಾಗಿ ಅಧಿಕೃತನಾದ ಯಾವನೇ ಅಧಿಕಾರಿಯು, ಬರಹದಲ್ಲಿನ ಆದೇಶದ ಮೂಲಕ, ಅಂಚೆಯ ಮೂಲಕ ರವಾನಿಸುವ ಕ್ರಮದಲ್ಲಿರುವ ಯಾವುದೇ ಅಂಚೆ ವಸ್ತು ಅಥವಾ ಯಾವುದೇ ವರ್ಗದ ಅಥವಾ ವಿವರಣೆಯ ಅಂಚೆಯ ವಸ್ತುವನ್ನು ತಡೆಗಟ್ಟತಕ್ಕದು, ಅಥವಾ ತಡೆಹಿಡಿದಿರಿಸತಕ್ಕದು ಅಥವಾ ಆದೇಶವನ್ನು ಹೊರಡಿಸುವ ಪ್ರಾಧಿಕಾರಿಯು ನಿರ್ದೇಶಿಸುವಂಥ ರೀತಿಯಲ್ಲಿ ವಿಲೆ ಮಾಡತಕ್ಕದು ಎಂದು ನಿರ್ದೇಶಿಸಬಹುದು.

(2) ಸಾರ್ವಜನಿಕ ತುರ್ತು ಪರಿಸ್ಥಿತಿಯ ಅಸ್ತಿತ್ವದ ಬಗ್ಗೆ ಅಥವಾ (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಕಾರ್ಯವು ಸಾರ್ವಜನಿಕ ಸುರಕ್ಷಿತ ಅಥವಾ ನೆಮ್ಮದಿಯ ಹಿತದೃಷ್ಟಿಯಿಂದ ಮಾಡಲಾಗಿದೆಯೋ ಹೇಗೆ ಎಂಬ ಬಗ್ಗೆ ಯಾವುದೇ ಸಂದೇಹವು ಉದ್ಭವಿಸಿದರೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪ್ರಮಾಣಪತ್ರವು ಆ ವಿಷಯದ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದು.

27. **ಕೃತ್ರಿಮ ಅಥವಾ ಹಿಂದೆ ಉಪಯೋಗಿಸಿದ ಸ್ಟಾಂಪುಗಳನ್ನು ಹೊಂದಿದ್ದು ವಿದೇಶದಿಂದ ಬಂದ ಅಂಚೆ ವಸ್ತುಗಳೊಂದಿಗೆ ವ್ಯವಹರಿಸಲು ಅಧಿಕಾರ**:—(1) (ಕ) ಕೃತ್ರಿಮ ಅಂಚೆ ಹಾಸಲು ಸ್ಟಾಂಪನ್ನು ಹೊಂದಿರುವ, ಎಂದರೆ, ಅಂಚೆ ಹಾಸಲು ಸ್ಟಾಂಪಿನ ಯಾವುದೇ ಪಡಿಯಚ್ಚು ಅಥವಾ ಅದರ ಅನುಕರಣೆ ಅಥವಾ ನಿರೂಪಣೆ, ಅಥವಾ

(ಖ) ಇತರ ಯಾವುದೇ ಅಂಚೆ ವಸ್ತುವನ್ನು, ಪೂರ್ವ ಸಂದಾಯ ಮಾಡಲು ಈ ಹಿಂದೆಯೇ ಉಪಯೋಗಿಸಿದಂಥ ಯಾವುದೇ ಅಂಚೆ ಹಾಸಲು ಸ್ಟಾಂಪಿನೊಂದಿಗೆ ಪೂರ್ವ ಸಂದಾಯಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಂಚೆ ವಸ್ತುವನ್ನು ಭಾರತದ ಪರಿಮಿತಿಗಳಾಚೆಯ ಯಾವುದೇ ಸ್ಥಳದಿಂದ ಅಂಚೆಯ ಮೂಲಕ ಸ್ವೀಕರಿಸಿರುವಲ್ಲಿ, ಅಂಚೆ ವಸ್ತುವನ್ನು ಯಾವ ಕಚೇರಿಯಲ್ಲಿ ಸ್ವೀಕರಿಸಲಾಯಿತೋ ಆ ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಯು, ಆ ಅಂಚೆ ವಸ್ತುವನ್ನು ಸ್ವೀಕರಿಸಲು ಖುದ್ದಾಗಿ ಅಥವಾ ಏಜೆಂಟನ ಮೂಲಕ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಚೆ ಕಚೇರಿಯಲ್ಲಿ ಹಾಜರಾಗಬೇಕೆಂದು ವಿಳಾಸದಾರನನ್ನು ಕರೆಯುವ ನೋಟೀಸನ್ನು ಅವನಿಗೆ ಕಳುಹಿಸತಕ್ಕದು

(2) ವಿಳಾಸದಾರ ಅಥವಾ ಅವನ ಏಜೆಂಟನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಚೆ ಕಚೇರಿಯಲ್ಲಿ ಹಾಜರಾದರೆ ಮತ್ತು ಅಂಚೆಯ ವಸ್ತುವನ್ನು ಕಳುಹಿಸಿರುವವನ ಹೆಸರು ಮತ್ತು ವಿಳಾಸವನ್ನು ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಗೆ ತಿಳಿಸಲು, ಮತ್ತು ಹಿಂದೆ ಹೇಳಿದ ಅಧಿಕಾರಿಗೆ ವಿಳಾಸ ಮತ್ತು ಕೃತ್ರಿಮ ಅಥವಾ ಈ ಹಿಂದೆಯೇ ಉಪಯೋಗಿಸಿದ ಅಂಚೆ ಹಾಸಲು ಸ್ಟಾಂಪನ್ನು ಹೊಂದಿರುವಂಥ ಅಂಚೆ ವಸ್ತುವಿನ ಭಾಗವನ್ನು ಅಥವಾ ಅಂಚೆಯ ವಸ್ತುವನ್ನು ಸ್ಟಾಂಪಿನಿಂದ ಪ್ರತ್ಯೇಕಗೊಳಿಸಲಾಗದಿದ್ದರೆ, ಇಡೀ ಅಂಚೆ ವಸ್ತುವನ್ನು ಮರು ವಶಾವಣೆ ಮಾಡಲು ಸಮ್ಮತಿಸಿದರೆ, ಆ ಅಂಚೆ ವಸ್ತುವನ್ನು ವಿಳಾಸದಾರನಿಗೆ ಅಥವಾ ಅವನ ಏಜೆಂಟನಿಗೆ ವಶಾವಣೆ ಮಾಡತಕ್ಕದು.

(3) ವಿಳಾಸದಾರ ಅಥವಾ ಅವನ ಏಜೆಂಟನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಚೆ ಕಚೇರಿಯಲ್ಲಿ ಹಾಜರಾಗಲು ತಪ್ಪಿದರೆ, ಅಥವಾ ಆ ಕಾಲದೊಳಗೆ ಹಾಜರಾಗಿದ್ದು ಕಳುಹಿಸಿರುವವನ ಹೆಸರು ಮತ್ತು ವಿಳಾಸವನ್ನು ತಿಳಿಸಲು ಅಥವಾ (2)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಅಂಚೆ ವಸ್ತು ಅಥವಾ ಅದರ ಭಾಗವನ್ನು ಪುನಃ ವಶಾವಣೆ ಮಾಡಲು ನಿರಾಕರಿಸಿದರೆ, ಅಂಚೆ ವಸ್ತುವನ್ನು ಅವನಿಗೆ ವಶಾವಣೆ ಮಾಡತಕ್ಕದಲ್ಲ. ಆದರೆ, ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡತಕ್ಕದು.

ವಿವರಣೆ,—ಈ ಪ್ರಕರಣದ ಉದ್ದೇಶಗಳಿಗಾಗಿ, "ಅಂಚೆ ಹಾಸಲು ಸ್ಟಾಂಪು" ಎಂಬ ಪದಗಳು, ಭಾರತದ ಯಾವುದೇ ಭಾಗ ಅಥವಾ ಸಾರ್ವಭೌಮ ಡೊಮಿನಿಯನ್ನುಗಳ, ಅಥವಾ ವಿದೇಶದ ಯಾವುದೇ ಅಂಚೆ ಹಾಸಲಿನ ದರ ಅಥವಾ ಸುಂಕವನ್ನು ಸೂಚಿಸುವುದಕ್ಕಾಗಿನ ಯಾವುದೇ ಅಂಚೆ ಹಾಸಲು ಸ್ಟಾಂಪನ್ನು ಮತ್ತು ಅಂಥ ಭಾಗ ಅಥವಾ ದೇಶದ ಸರ್ಕಾರದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಥದೇ ಉದ್ದೇಶಕ್ಕಾಗಿ ಒದಗಿಸಿದ ಅಥವಾ ಅಧಿಕೃತಗೊಳಿಸಲಾದ ಯಾವುದೇ ಸ್ಟಾಂಪು ಹಾಕುವ ಯಂತ್ರದ ಮುದ್ರೆಯನ್ನು ಒಳಗೊಳ್ಳುತ್ತದೆ.

**27ಕ. ಕೆಲವು ವೃತ್ತಪತ್ರಿಕೆಗಳನ್ನು ಅಂಚೆಯ ಮೂಲಕ ಕಳುಹಿಸುವುದರ ಬಗ್ಗೆ ನಿಷೇಧ** :—1867ರ ಪುಸ್ತಕಗಳ ಮುದ್ರಣ ಮತ್ತು ನೋಂದಣಿ ಅಧಿನಿಯಮ (1867ರ 25) ದಲ್ಲಿ ಹೇಳಲಾದ ನಿಯಮಗಳಿಗೆ ಅನುಗುಣವಾಗಿ ಅಲ್ಲದೆ ಭಾರತದಲ್ಲಿ ಮುದ್ರಿಸಿದ ಮತ್ತು ಪ್ರಕಟಿಸಿದ ಯಾವುದೇ ವೃತ್ತಪತ್ರಿಕೆಯನ್ನು ಅಂಚೆಯ ಮೂಲಕ ಕಳುಹಿಸತಕ್ಕುದಲ್ಲ.

**27ಖ. ಅಂಚೆಯ ಮೂಲಕ ಕಳುಹಿಸಲಾಗುತ್ತಿರುವ ವೃತ್ತಿ ಪತ್ರಿಕೆಗಳು ಮತ್ತು ಇತರ ವಸ್ತುಗಳನ್ನು ತಡೆಹಿಡಿದಿರಿಸಲು ಅಧಿಕಾರ**:—(1) ಈ ಬಗ್ಗೆ ಪೋಸ್ಟ್ ಮಾಸ್ಟರ್ ಜನರಲ್ಲನಿಂದ ಅಧಿಕೃತನಾದ ಅಂಚೆ ಇಲಾಖೆಯ ಯಾವನೇ ಅಧಿಕಾರಿಯು, ಅಂಚೆಯ ಮೂಲಕ ಕಳುಹಿಸಿದ ಯಾವುದೇ ಅಂಚೆ ವಸ್ತುವು, —

(ಕ) (i) 1867ರ ಪುಸ್ತಕಗಳ ಮುದ್ರಣ ಮತ್ತು ನೋಂದಣಿ ಅಧಿನಿಯಮ (1867ರ 25) ದಲ್ಲಿ ಪರಿಭಾಷಿಸಿರುವ ಯಾವುದೇ ವೃತ್ತಪತ್ರಿಕೆ ಅಥವಾ ಪುಸ್ತಕವನ್ನು ; ಅಥವಾ

(ii) ಯಾವುದೇ ರಾಜದ್ರೋಹಾತ್ಮಕವಾದ ವಿಷಯ, ಅಂದರೆ ಭಾರತ ದಂಡಸಂಹಿತೆ, (1860ರ 45)ಯ 124ಕ ಪ್ರಕರಣದ ಮೇರೆಗೆ ದಂಡನೀಯವಾದಂಥ ಪ್ರಕಟಣೆಯ ಯಾವುದೇ ವಿಷಯವನ್ನು ಒಳಗೊಂಡಿರುವ ಯಾವುದೇ ದಸ್ತಾವೇಜನ್ನು ; ಅಥವಾ

(ಖ) 1867ರ ಪುಸ್ತಕಗಳ ಮುದ್ರಣ ಮತ್ತು ನೋಂದಣಿ ಅಧಿನಿಯಮ (1867ರ 25)ದಲ್ಲಿ ವಿವರಿಸಿರುವ ನಿಯಮಗಳಿಗೆ ಅನುಗುಣವಾಗಿ ಅಲ್ಲದೆ, ಅನ್ಯಥಾ ಸಂಪಾದಿಸಿದ, ಮುದ್ರಿಸಿದ ಅಥವಾ ಪ್ರಕಟಿಸಿದ ಆ ಅಧಿನಿಯಮದಲ್ಲಿ ಪರಿಭಾವಿಸಿದಂತೆ ಯಾವುದೇ ವೃತ್ತಪತ್ರಿಕೆಯನ್ನು ಒಳಗೊಂಡಿದೆಯೆಂದು ಅವನು ಶಂಕಿಸಿದರೆ, ಅವನು ಅದನ್ನು ತಡೆಯಬಹುದು ಮತ್ತು ಹಾಗೆ ತಡೆಹಿಡಿದ ಅಂಚೆ ವಸ್ತುವನ್ನು ಈ ಬಗ್ಗೆ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂತಹ ಅಧಿಕಾರಿಗೆ ಒಪ್ಪಿಸತಕ್ಕುದು.

(2) (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಅಂಚೆ ವಸ್ತುವನ್ನು ತಡೆಹಿಡಿದಿಡುವ ಯಾವನೇ ಅಧಿಕಾರಿಯು, ಅಂಥ ವಸ್ತುವಿನ ವಿಳಾಸದಾರನಿಗೆ ಅಂಥ ತಡೆ ಹಿಡಿದಿರಿಸುವಿಕೆಯ ಸಂಗತಿಯ ಬಗ್ಗೆ ನೋಟೀಸನ್ನು ತಕ್ಷಣ ಅಂಚೆಯ ಮೂಲಕ ಕಳುಹಿಸತಕ್ಕುದು.

(3) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿಟ್ಟ ಯಾವುದೇ ಅಂಚೆ ವಸ್ತುವಿನ ಒಳಗಿರುವ ವಿಷಯಗಳನ್ನು ಪರೀಕ್ಷಿಸುವಂತೆ ಮಾಡತಕ್ಕುದು, ಮತ್ತು ರಾಜ್ಯ ಸರ್ಕಾರಕ್ಕೆ, ಆ ವಸ್ತುವು (1)ನೇ ಉಪ-ಪ್ರಕರಣದ (ಕ) ಖಂಡ ಅಥವಾ (ಖ) ಖಂಡಗಳಲ್ಲಿ ವರ್ಣಿಸಿರುವ ಸ್ವರೂಪದ ಯಾವುದೇ ವೃತ್ತಪತ್ರಿಕೆ, ಪುಸ್ತಕ ಅಥವಾ ಇತರ ದಸ್ತಾವೇಜನ್ನು ಒಳಗೊಂಡಿದೆಯೆಂದು ಕಂಡುಬಂದರೆ ಆ ವಸ್ತುವಿನ ಮತ್ತು ಅದರ ಒಳಾಂಶಗಳ ವಿಲೇಗಾಗಿ ತಾನು ಯೋಗ್ಯವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು, ಮತ್ತು ಹಾಗೆ ಕಂಡುಬರದಿದ್ದರೆ ಅದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಭಿಗ್ರಹಣಕ್ಕೆ ಅನ್ಯಥಾ ಹೊಣೆಯಾಗುವ ಹೊರತು, ವಸ್ತುವನ್ನು ಮತ್ತು ಒಳಾಂಶಗಳನ್ನು ಬಿಡುಗಡೆ ಮಾಡತಕ್ಕುದು :

ಪರಂತು, (1)ನೇ ಉಪಪ್ರಕರಣದ (ಕ) ಖಂಡದ ಉಪಬಂಧಗಳ ಮೇರೆಗೆ ತಡೆಹಿಡಿದಿರಿಸಿದ ಯಾವುದೇ ವಸ್ತುವಿನಲ್ಲಿ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು, ಅಂಥ ತಡೆ ಹಿಡಿದಿಟ್ಟ ದಿನಾಂಕದಿಂದ ಎರಡು ತಿಂಗಳೊಳಗಾಗಿ ಅದನ್ನು ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ರಾಜ್ಯ ಸರ್ಕಾರವು ಅಂಥ ಅರ್ಜಿಯನ್ನು ಪರ್ಯಾಲೋಚಿಸತಕ್ಕುದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು :

ಮತ್ತೂ ಪರಂತು, ಅಂಥ ಅರ್ಜಿಯನ್ನು ತಿರಸ್ಕರಿಸಿದರೆ, ಅರ್ಜಿದಾರನು, ಅರ್ಜಿಯನ್ನು ತಿರಸ್ಕರಿಸಿದ ಆದೇಶದ ದಿನಾಂಕದಿಂದ ಎರಡು ತಿಂಗಳೊಳಗಾಗಿ, ವಸ್ತುವು ರಾಜದ್ರೋಹಾತ್ಮಕ ವಿಷಯಗಳನ್ನು ಒಳಗೊಂಡಿರುವ ಯಾವುದೇ ವೃತ್ತಪತ್ರಿಕೆ, ಪುಸ್ತಕ ಅಥವಾ ಇತರ ದಸ್ತಾವೇಜನ್ನು ಒಳಗೊಂಡಿರಲಿಲ್ಲವೆಂಬ ಆಧಾರದ ಮೇಲೆ ಆ ವಸ್ತುವನ್ನು ಮತ್ತು ಅದರ ಒಳಾಂಶಗಳನ್ನು ಬಿಡುಗಡೆ ಮಾಡಬೇಕೆಂದು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(4) ಈ ಪ್ರಕರಣದಲ್ಲಿ "ದಸ್ತಾವೇಜು" ಎಂಬುದು ಯಾವುದೇ ವರ್ಣಚಿತ್ರ, ರೇಖಾಚಿತ್ರ ಅಥವಾ ಭಾವಚಿತ್ರ ಅಥವಾ ಇತರ ದೃಶ್ಯ ನಿರೂಪಣೆಯನ್ನು ಒಳಗೊಳ್ಳುತ್ತದೆ.

**27ಗ. ಹಾಗೆ ತಡೆಹಿಡಿದಿಟ್ಟ ವೃತ್ತಪತ್ರಿಕೆಗಳು ಮತ್ತು ವಸ್ತುಗಳ ಬಿಡುಗಡೆಗಾಗಿನ ಅರ್ಜಿಗಳನ್ನು ಉಚ್ಚನ್ಯಾಯಾಲಯವು ವಿಲೆ ಮಾಡುವ ಬಗ್ಗೆ ಪ್ರಕ್ರಿಯೆ**:—27ಖ ಪ್ರಕರಣದ (3)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಮಾಡಿಕೊಂಡ ಪ್ರತಿಯೊಂದು ಅರ್ಜಿಯನ್ನು 1898ರ ದಂಡ ಪ್ರಕ್ರಿಯಾ ಸಂಹಿತೆ (1898ರ 5)ಯ 99ಘದಿಂದ 99 ಚ ವರೆಗಿನ ಪ್ರಕರಣಗಳ ಮೂಲಕ ಉಪಬಂಧಿಸಲಾದ ರೀತಿಯಲ್ಲಿ, ಆ ಸಂಹಿತೆಯ 99ಗ ಪ್ರಕರಣದ ಮೂಲಕ ಉಪಬಂಧಿಸಿದ ರೀತಿಯಲ್ಲಿ ರಚಿತವಾದ ಉಚ್ಚ ನ್ಯಾಯಾಲಯದ ವಿಶೇಷ ನ್ಯಾಯಪೀಠವು ಚುನಾವಣೆ ಮಾಡತಕ್ಕುದು ಮತ್ತು ನಿರ್ಧರಿಸತಕ್ಕುದು.

**27ಘ. ಪ್ರತಿಷೇಧಿತ ಅಧಿಕಾರ ವ್ಯಾಪ್ತಿ**:—27ಖ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ಕೈಗೊಳ್ಳಲಾದ ಕ್ರಮವನ್ನು, ಆ ಪ್ರಕರಣದ (3)ನೇ ಉಪಪ್ರಕರಣದ ಎರಡನೇ ಪರಂತುಕದ ಅನುಸಾರವಾಗಲ್ಲದೆ ಅನ್ಯಥಾ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

## ಅಧ್ಯಾಯ—VI

### ನೋಂದಣಿ, ವಿಮೆ ಮತ್ತು ಮೌಲ್ಯ ಸಂದಾಯವಾಗಬೇಕಾದ ಅಂಚೆ

28. **ಅಂಚೆ ವಸ್ತುಗಳ ನೋಂದಣಿ:**—ಅಂಚೆಯ ವಸ್ತುವನ್ನು ಕಳುಹಿಸುವವನು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅಂಚೆ ವಸ್ತುವನ್ನು ಯಾವ ಅಂಚೆ ಕಚೇರಿಯಲ್ಲಿ ಅಂಚೆಗೆ ಹಾಕಲಾಯಿತೋ ಆ ಅಂಚೆ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು ಮತ್ತು ಅದಕ್ಕೆ ರಸೀದಿಯನ್ನು ಅಗತ್ಯಪಡಿಸಬಹುದು ಮತ್ತು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಯಾವುದೇ ಅಂಚೆ ಅಸಲಿನ ಜೊತೆಗೆ, ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ಹೆಚ್ಚಿನ ಫೀಜನ್ನು ಅಂಚೆಯ ವಸ್ತುಗಳ ನೋಂದಣಿಯ ಬಗ್ಗೆ ಸಂದಾಯ ಮಾಡತಕ್ಕದು ಎಂದು ನಿರ್ದೇಶಿಸಬಹುದು.

29. **ನೋಂದಣಿಯ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ :**—(1) ಕೇಂದ್ರ ಸರ್ಕಾರವು, ಅಂಚೆ ವಸ್ತುಗಳ ನೋಂದಣಿಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು—

(ಕ) ಯಾವ ಪ್ರಕರಣಗಳಲ್ಲಿ ನೋಂದಣಿಯು ಅಗತ್ಯವಾಗಿರತಕ್ಕದು ಎಂಬುದನ್ನು ಘೋಷಿಸಬಹುದು;

(ಖ) ನೋಂದಾಯಿಸುವುದಕ್ಕೆ ಫೀಜನ್ನು ಯಾವ ರೀತಿಯಲ್ಲಿ ಸಂದಾಯ ಮಾಡತಕ್ಕದೆಂಬುದನ್ನು ನಿಯಮಿಸಬಹುದು ; ಮತ್ತು

(ಗ) ನೋಂದಣಿ ಮಾಡಲು ಅಗತ್ಯಪಡಿಸಿದ ಯಾವ ಅಂಚೆ ವಸ್ತುವಿನ ಮೇಲೆ ನೋಂದಣಿ ಫೀಜನ್ನು ಪೂರ್ವ ಸಂದಾಯ ಮಾಡಿಲ್ಲವೋ ಆ ಅಂಚೆ ವಸ್ತುವನ್ನು ಬಟವಾಡೆ ಮಾಡುವಾಗ ನೋಂದಣಿ ಫೀಜಿನ ಎರಡರಷ್ಟನ್ನು ವಿಧಿಸತಕ್ಕದೆಂದು ನಿರ್ದೇಶಿಸಬಹುದು.

(3) ನೋಂದಣಿ ಮಾಡುವ ಉದ್ದೇಶಕ್ಕಾಗಿ ಅಂಚೆ ಇಲಾಖೆಗೆ ಒಪ್ಪಿಸಿದ ಅಂಚೆ ವಸ್ತುಗಳನ್ನು ನೋಂದಣಿ ಮಾಡಿದಾಗ ಮಹಾ ನಿರ್ದೇಶಕನು ಆಗಿಂದಾಗ್ಗೆ ಆದೇಶದ ಮೂಲಕ ಗೊತ್ತುಪಡಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಬಟವಾಡೆ ಮಾಡತಕ್ಕದು.

30. **ಅಂಚೆ ವಸ್ತುಗಳ ವಿಮೆ :**—ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ—

(ಕ) ಯಾವುದೇ ಅಂಚೆ ವಸ್ತುವನ್ನು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಯಾವ ಅಂಚೆ ಕಚೇರಿಯಲ್ಲಿ ಅಂಚೆಗೆ ಹಾಕಲಾಯಿತೋ, ಆ ಅಂಚೆ ಕಚೇರಿಯಲ್ಲಿ, ಅಂಚೆಯ ಮೂಲಕ ಕಳುಹಿಸುವಾಗ ಉಂಟಾಗುವ ನಷ್ಟ ಅಥವಾ ಹಾನಿಯ ವಿರುದ್ಧ ವಿಮೆ ಮಾಡಿಸತಕ್ಕದು ಮತ್ತು ಆ ಬಗ್ಗೆ ರಸೀದಿಯನ್ನು ಅದನ್ನು ಅಂಚೆಗೆ ಹಾಕುವ ವ್ಯಕ್ತಿಗೆ ಕೊಡತಕ್ಕದು ಎಂದು ನಿರ್ದೇಶಿಸಬಹುದು ; ಮತ್ತು

(ಖ) ಈ ಅಧಿನಿಯಮದ ಮೇರೆಗೆ, ವಿಧಿಸಬಹುದಾದ ಯಾವುದೇ ಅಂಚೆ ಹಾಸಲು ಮತ್ತು ನೋಂದಣಿ ಫೀಜಿನ ಜೊತೆಗೆ, ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ಹೆಚ್ಚಿನ ಫೀಜನ್ನು ಅಂಚೆ ವಸ್ತುಗಳ ವಿಮೆಗಾಗಿ ಸಂದಾಯ ಮಾಡತಕ್ಕದೆಂದು ನಿರ್ದೇಶಿಸಬಹುದು.

31. **ಅಂಚೆ ವಸ್ತುಗಳ ವಿಮೆಯನ್ನು ಅಗತ್ಯಪಡಿಸುವ ಅಧಿಕಾರ :**—ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವ ಪ್ರಕರಣಗಳಲ್ಲಿ ವಿಮೆಯು ಅಗತ್ಯವಾಗಿರತಕ್ಕದೆಂಬುದನ್ನು ಘೋಷಿಸಬಹುದು ಮತ್ತು ವಿಮೆಯನ್ನು ಮಾಡಿಸದೆ ಅಂಚೆಗೆ ಹಾಕಲ್ಪಟ್ಟ, ವಿಮೆ ಮಾಡಲು ಅಗತ್ಯವಿರುವ ಯಾವುದನ್ನೇ ಆಗಲಿ ಒಳಗೊಂಡಿರುವ ಯಾವುದೇ ಅಂಚೆ ವಸ್ತುವನ್ನು ಕಳುಹಿಸಿದವನಿಗೆ ಹಿಂತಿರುಗಿಸತಕ್ಕದು ಅಥವಾ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ವಿಶೇಷ ಫೀಜಿನ ಸಂದಾಯಕ್ಕೊಳಪಟ್ಟು ವಿಳಾಸದಾರನಿಗೆ ಬಟವಾಡೆ ಮಾಡತಕ್ಕದು ಎಂದು ನಿರ್ದೇಶಿಸಬಹುದು

ಪರಂತು, ಹಿಂದೆ ಹೇಳಿದಂತೆ ವಿಶೇಷ ಫೀಜಿನ ವಿಧಿಸುವಿಕೆಯು ಅಂಚೆ ವಸ್ತುವಿನ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಮೇಲೆ ಯಾವುದೇ ಹೊಣೆಗಾರಿಕೆಯನ್ನು ವಿಧಿಸತಕ್ಕದಲ್ಲ.

32. **ವಿಮೆಯ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ :**—(1) ಕೇಂದ್ರ ಸರ್ಕಾರವು, ಅಂಚೆ ವಸ್ತುಗಳ ವಿಮೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) 30ನೇ ಪ್ರಕರಣದ ಮೇರೆಗೆ ಯಾವ ವರ್ಗದ ಅಂಚೆ ವಸ್ತುಗಳನ್ನು ವಿಮೆ ಮಾಡಬಹುದೆಂಬುದನ್ನು ಘೋಷಿಸಬಹುದು ;

(ಖ) ಅಂಚೆ ವಸ್ತುಗಳನ್ನು ವಿಮೆ ಮಾಡಬಹುದಾದಂಥ ಮೊಬಲಗಿನ ಮಿತಿಯನ್ನು ನಿಗದಿಪಡಿಸಬಹುದು ; ಮತ್ತು

(ಗ) ವಿಮೆ ಫೀಜನ್ನು ಸಂದಾಯ ಮಾಡತಕ್ಕ ರೀತಿಯನ್ನು ನಿಯಮಿಸಬಹುದು.

(3) ವಿಮೆ ಮಾಡುವ ಉದ್ದೇಶಕ್ಕಾಗಿ ಅಂಚೆ ಇಲಾಖೆಗೆ ಒಪ್ಪಿಸಿದ ಅಂಚೆ ವಸ್ತುಗಳನ್ನು ವಿಮೆ ಮಾಡಿದಾಗ, ಮಹಾ ನಿರ್ದೇಶಕನು ಕಾಲಕಾಲಕ್ಕೆ ಆದೇಶದ ಮೂಲಕ ಗೊತ್ತುಪಡಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಕಾಲಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಬಟವಾಡೆ ಮಾಡತಕ್ಕದು.

33. **ವಿಮೆ ಮಾಡಿದ ಅಂಚೆ ವಸ್ತುಗಳ ವಿಷಯದಲ್ಲಿ ಹೊಣೆಗಾರಿಕೆ :**—ಕೇಂದ್ರ ಸರ್ಕಾರವು ನಿಯಮದ ಮೂಲಕ ನಿಯಮಿಸಬಹುದಾದಂಥ ಷರತ್ತುಗಳು ಮತ್ತು ಪರಿಬಂಧಗಳಿಗೊಳಪಟ್ಟು ಕೇಂದ್ರ ಸರ್ಕಾರವು, ಅಂಚೆಯ ಮೂಲಕ ಕಳುಹಿಸುವ ಕ್ರಮದಲ್ಲಿ ಅಂಚೆ ವಸ್ತು ಅಥವಾ ಅದರ ಒಳಾಂಶಕ್ಕೆ ಆದ ನಷ್ಟ ಅಥವಾ ಯಾವುದೇ ಹಾನಿಯ ಸಂಬಂಧದಲ್ಲಿ ಯಾವ ಅಂಚೆ ವಸ್ತುವನ್ನು ವಿಮೆ ಮಾಡಲಾಗಿದೆಯೋ ಆ ವಸ್ತುವಿನ ಮೊಬಲಗಿಗೆ ಮೀರದಂತೆ ಅದನ್ನು ಕಳುಹಿಸಿರುವವನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದು :

ಪರಂತು, ಹಾಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವು ಯಾವುದೇ ಸಂದರ್ಭದಲ್ಲಿ ನಷ್ಟ ಹೊಂದಿದ ವಸ್ತುವಿನ ಮೌಲ್ಯವನ್ನು ಅಥವಾ ಹಾನಿ ಹೊಂದಿದ ಮೊಬಲಗನ್ನು ಮೀರತಕ್ಕದಲ್ಲ.

34. **ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳನ್ನು ಅಂಚೆ ಮೂಲಕ ಕಳುಹಿಸುವುದು:**— ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಇತರ ಉಪಬಂಧಗಳಿಗೆ ಮತ್ತು ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ದರದಲ್ಲಿ ಫೀಜುಗಳ ಸಂದಾಯಕ್ಕೆ ಒಳಪಟ್ಟು, ಅಂಚೆ ವಸ್ತುವನ್ನು ಕಳುಹಿಸುವವನು ಅದನ್ನು ಅಂಚೆಗೆ ಹಾಕುವ ಕಾಲದಲ್ಲಿ ಬರಹದಲ್ಲಿ ನಿರ್ದಿಷ್ಟಪಡಿಸಿದ ಹಣದ ಮೊತ್ತವನ್ನು, ಅದನ್ನು ಬಟವಾಡೆ ಮಾಡಿದಾಗ ವಿಳಾಸದಾರನಿಂದ ವಸೂಲು ಮಾಡತಕ್ಕದು ' ಮತ್ತು ಹಾಗೆ ವಸೂಲು ಮಾಡಿದ ಮೊತ್ತವನ್ನು ಕಳುಹಿಸಿದವನಿಗೆ ಸಂದಾಯ ಮಾಡತಕ್ಕದೆಂದು ನಿರ್ದೇಶಿಸಬಹುದು:

ಪರಂತು, ಕೇಂದ್ರ ಸರ್ಕಾರವು, ವಿಳಾಸದಾರನಿಂದ ಮೊತ್ತವನ್ನು ಸ್ವೀಕರಿಸುವ ಹೊರತು ಮತ್ತು ಸ್ವೀಕರಿಸುವವರೆಗೆ ವಸೂಲಿಗಾಗಿ ನಿರ್ದಿಷ್ಟಪಡಿಸಿದ ಮೊತ್ತದ ಸಂಬಂಧದಲ್ಲಿ ಯಾವುದೇ ಹೊಣೆಗಾರಿಕೆಯನ್ನು ವಹಿಸತಕ್ಕದಲ್ಲ.

**ವಿವರಣೆ.**—ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಕಳುಹಿಸಲಾದ ಅಂಚೆ ವಸ್ತುಗಳನ್ನು ''ಮೌಲ್ಯ ಸಂದಾಯ ಮಾಡಬೇಕಾದ" ಅಂಚೆ ವಸ್ತುಗಳೆಂದು ವರ್ಣಿಸಬಹುದು.

35. **ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳಿಗೆ ಸಂಬಂಧಿಸಿದಂತೆ ನಿಯಮ ರಚನಾ ಅಧಿಕಾರ:**— (1) ಕೇಂದ್ರ ಸರ್ಕಾರವು, ಅಂಚೆಯ ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳನ್ನು ಅಂಚೆ ಮೂಲಕ ಕಳುಹಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು —

(ಕ) ಯಾವ ವರ್ಗಗಳ ಅಂಚೆ ವಸ್ತುಗಳನ್ನು ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳೆಂದು ಕಳುಹಿಸಬಹುದೆಂಬುದನ್ನು ಘೋಷಿಸಬಹುದು ;

(ಖ) ಅಂಚೆ ವಸ್ತುವನ್ನು ಕಳುಹಿಸುವವನು ತಾನು ಸ್ವೀಕರಿಸಿದ ಸದ್ಭಾವನಾ ಪೂರ್ವಕ ಆದೇಶವನ್ನು ನೆರವೇರಿಸುವಲ್ಲಿ ಆ ವಸ್ತುವನ್ನು ಕಳುಹಿಸಲಾಗಿದೆ ಎಂದು ಘೋಷಿಸಿದ ಹೊರತು, ಯಾವುದೇ ಅಂಚೆ ವಸ್ತುವನ್ನು ಹಾಗೆ ಕಳುಹಿಸತಕ್ಕದಲ್ಲ ಎಂದು ಘೋಷಿಸಬಹುದು ;

(ಗ) ಯಾವುದೇ ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುವಿನ ಬಟವಾಡೆಯಲ್ಲಿ ವಸೂಲು ಮಾಡಬೇಕಾದ ಮೌಲ್ಯವನ್ನು ಮಿತಿಗೊಳಿಸಬಹುದು;

(ಘ) ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುವನ್ನು ಕಳುಹಿಸುವವರು ಮಾಡಬೇಕಾದ ಘೋಷಣೆಯ ನಮೂನೆ, ಮತ್ತು ಫೀಜಿನ ಸಂದಾಯದ ಕಾಲ ಮತ್ತು ರೀತಿಯನ್ನು ನಿಯಮಿಸಬಹುದು;

(ಙ) ಯಾವುದೇ ಮೌಲ್ಯ ಸಂದಾಯ ಮಾಡಬೇಕಾದ ಅಂಚೆವಸ್ತುವನ್ನು ಬಟವಾಡೆ ಮಾಡುವಾಗ ವಸೂಲಾದ ಹಣವನ್ನು ಮೋಸದ ಪ್ರಕರಣಗಳಲ್ಲಿ ತಡೆಹಿಡಿದಿರಿಸುವುದಕ್ಕಾಗಿ ಮತ್ತು ವಿಳಾಸದಾರನಿಗೆ ಮರುಸಂದಾಯಕ್ಕಾಗಿ ಉಪಬಂಧಿಸಬಹುದು; ಮತ್ತು

(ಚ) ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳನ್ನು ಬಟವಾಡೆ ಮಾಡುವ ಅಥವಾ ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ದೂರುಗಳ ಬಗ್ಗೆ ವಿಚಾರಣೆಗಾಗಿ ವಿಧಿಸಬೇಕಾದ ಫೀಜುಗಳನ್ನು ನಿಯಮಿಸಬಹುದು.

(3) ''ಮೌಲ್ಯ ಸಂದಾಯ ಮಾಡಬೇಕಾದುದು" ಎಂದು ಕಳುಹಿಸುವ ಉದ್ದೇಶಕ್ಕಾಗಿ ಅಂಚೆ ವಸ್ತುಗಳನ್ನು ಅಂಚೆ ಇಲಾಖೆಗೆ ಒಪ್ಪಿಸತಕ್ಕದು ಮತ್ತು ಹಾಗೆ ಕಳುಹಿಸಿದಾಗ, ಮಹಾ ನಿರ್ದೇಶಕರು ಕಾಲಕಾಲಕ್ಕೆ ಆದೇಶದ ಮೂಲಕ ಗೊತ್ತುಪಡಿಸಬಹುದಾದಂಥ ಕಾಲಗಳು ಮತ್ತು ರೀತಿಯಲ್ಲಿ ಬಟವಾಡೆ ಮಾಡತಕ್ಕದು.

(4) (2)ನೇ ಉಪಪ್ರಕರಣದ (ಙ) ಖಂಡದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಮಾಡಿದ ಅಥವಾ ಸದ್ಭಾವನೆಯಿಂದ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಅಥವಾ ಅಂಚೆ ಇಲಾಖೆಯ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದಲ್ಲ.

36. **ಬೇರೆ ದೇಶಗಳೊಡನೆ ಮಾಡಿಕೊಂಡ ಏರ್ಪಾಡುಗಳನ್ನು ಜಾರಿಗೊಳಿಸುವುದಕ್ಕೆ ಅಧಿಕಾರ:**— (1) ಯುನೈಟೆಡ್ ಕಿಂಗ್‌ಡಂ ಅಥವಾ ಯಾವುದೇ ಬ್ರಿಟಿಷ್ ಸ್ವಾಧೀನ ದೇಶ ಅಥವಾ ವಿದೇಶದೊಡನೆ, ಭಾರತ ಮತ್ತು ಯುನೈಟೆಡ್ ಕಿಂಗ್‌ಡಂ ಅಥವಾ ಅಂಥ ಸ್ವಾಧೀನ ದೇಶ ಅಥವಾ ವಿದೇಶಗಳ ನಡುವೆ ಮೌಲ್ಯ ಸಂದಾಯ ಮಾಡಬೇಕಾದ ಅಂಚೆ ವಸ್ತುಗಳನ್ನು ನೋಂದಾಯಿತ ಅಂಚೆಯ, ವಿಮೆಯ ಮೂಲಕ ಕಳುಹಿಸುವ ಏರ್ಪಾಟುಗಳು ಜಾರಿಯಲ್ಲಿರುವಲ್ಲಿ, ಕೇಂದ್ರ ಸರ್ಕಾರವು, ಅಂಥ ಏರ್ಪಾಡುಗಳನ್ನು ಜಾರಿಗೆ ತರುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) ಹಿಂದೆ ಹೇಳಿದಂಥ ಅಂಚೆ ವಸ್ತುಗಳನ್ನು ಕಳುಹಿಸುವವನು ಮಾಡಬೇಕಾದ ಘೋಷಣೆಯ ನಮೂನೆಯನ್ನು ; ಮತ್ತು

(ಖ) ಅವುಗಳ ಬಗ್ಗೆ ವಿಧಿಸಬೇಕಾದ ಫೀಜುಗಳನ್ನು ನಿಯಮಿಸಬಹುದು.

## ಅಧ್ಯಾಯ—VII

### ಬಟವಾಡೆಯಾಗದ ಅಂಚೆ ವಸ್ತುಗಳು

37. **ಬಟವಾಡೆಯಾಗದ ಅಂಚೆ ವಸ್ತುಗಳ ವಿಲೆಗಾಗಿ ನಿಯಮ ರಚನಾ ಅಧಿಕಾರ:**— (1) ಕೇಂದ್ರ ಸರ್ಕಾರವು, ಯಾವುದೇ ಕಾರಣಕ್ಕಾಗಿ ಬಟವಾಡೆ ಮಾಡಲಾಗದಂಥ (ಇದರಲ್ಲಿ ಇನ್ನು ಮುಂದೆ "ಬಟವಾಡೆಯಾಗದ ಅಂಚೆ ವಸ್ತುಗಳು" ಎಂದು ಉಲ್ಲೇಖಿಸಿದ) ಅಂಚೆ ವಸ್ತುಗಳ ವಿಲೆಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) ಅಂಚೆ ಕಚೇರಿಯಲ್ಲಿ ಬಟವಾಡೆಯಾಗದ ಅಂಚೆ ವಸ್ತುಗಳು ಎಷ್ಟು ಅವಧಿಯವರೆಗೆ ಆ ಅಂಚೆ ಕಚೇರಿಯಲ್ಲಿ ಉಳಿಯತಕ್ಕದೆಂಬುದನ್ನು ನಿಯಮಿಸಬಹುದು : ಮತ್ತು

(ಖ) ಬಟವಾಡೆಯಾಗದ ಅಂಚೆ ವಸ್ತುಗಳ ಅಥವಾ ಬಟವಾಡೆಯಾಗದ ಅಂಚೆ ವಸ್ತುಗಳ ಯಾವುದೇ ವರ್ಗದ ಪಟ್ಟಿಯನ್ನು ಪ್ರಕಟಿಸುವುದಕ್ಕಾಗಿ ಉಪಬಂಧಿಸಬಹುದು.

(3) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ, ನಿಯಮದ ಮೂಲಕ ನಿಯಮಿಸಿದ ಅವಧಿಯವರೆಗೆ ಅಂಚೆ ಕಚೇರಿಯಲ್ಲಿ ತಡೆಹಿಡಿದಿಟ್ಟ ತರುವಾಯ, ಬಟವಾಡೆಯಾಗದ ಪ್ರತಿಯೊಂದು ಅಂಚೆ ವಸ್ತುವನ್ನು, ಹೆಚ್ಚಿನ ಚಾರ್ಜು ಇಲ್ಲದೆ ಕಳುಹಿಸಿರುವವನಿಗೆ ಹಿಂತಿರುಗಿಸುವುದಕ್ಕಾಗಿ, ಅದನ್ನು ಯಾವ ಅಂಚೆ ಕಚೇರಿಯಲ್ಲಿ ಅಂಚೆಗೆ ಹಾಕಲಾಯಿತೋ ಆ ಅಂಚೆ ಕಚೇರಿಗೆ ಅಥವಾ ಪೋಸ್ಟ್ ಮಾಸ್ಟರ್ ಜನರಲ್‌ನ ಕಚೇರಿಗೆ ಕಳುಹಿಸತಕ್ಕದು.

38. **ಪೋಸ್ಟ್ ಮಾಸ್ಟರ್ ಜನರಲ್‌ನ ಕಚೇರಿಯಲ್ಲಿ ಬಟವಾಡೆಯಾಗದೆ ಉಳಿದಿರುವ ಅಂಚೆ ವಸ್ತುಗಳ ವಿಲೆ:**— (1) 37ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪೋಸ್ಟ್‌ಮಾಸ್ಟರ್ ಜನರಲ್‌ನ ಕಚೇರಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ಅಂಚೆ ವಸ್ತುವಿನ ಬಗ್ಗೆ ಕೆಳಕಂಡಂತೆ ವ್ಯವಹರಿಸತಕ್ಕದು :—

(ಕ) ಕಾರ್ಯಸಾಧ್ಯವಾದರೆ, ಅದನ್ನು ವಿಳಾಸದಾರನಿಗೆ ವಾಪಸ್ಸು ಕಳುಹಿಸತಕ್ಕದು ಮತ್ತು ಅಂಚೆಯ ಮೂಲಕ ಕಳುಹಿಸತಕ್ಕದು ; ಅಥವಾ

(ಖ) ಹಿಂದೆ ಹೇಳಿದಂತೆ ಅದನ್ನು ವಾಪಸ್ಸು ಕಳುಹಿಸಲಾಗದಿದ್ದರೆ ಮತ್ತು ಕಳುಹಿಸಲಾಗದಿದ್ದರೆ, ಕಳುಹಿಸಿದವನ ಹೆಸರು ಮತ್ತು ವಿಳಾಸವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಈ ಬಗ್ಗೆ ಪೋಸ್ಟ್ ಮಾಸ್ಟರ್ ಜನರಲ್ಲನು ನೇಮಕ ಮಾಡಿದ ಮತ್ತು ರಹಸ್ಯವನ್ನು ಕಾಪಾಡಲು ಬದ್ಧನಾಗಿರುವ ಯಾವನೇ ಅಧಿಕಾರಿಯು ತೆರೆಯತಕ್ಕದು.

(2) ಕಳುಹಿಸಿರುವವನ ಹೆಸರು ಮತ್ತು ವಿಳಾಸವನ್ನು ಹಾಗೆ ಖಚಿತಪಡಿಸಿಕೊಂಡರೆ, ಹೆಚ್ಚಿನ ಚಾರ್ಜಿಲ್ಲದೆ ಅಥವಾ ಕೇಂದ್ರ ಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂತಹ ಹೆಚ್ಚಿನ ಚಾರ್ಜುಗಳಿಗೊಳಪಟ್ಟು, ಅಂಚೆಯ ಮೂಲಕ ಅದನ್ನು ಕಳುಹಿಸುವವನಿಗೆ ಹಿಂದಿರುಗಿಸತಕ್ಕದು.

39. **ಬಟವಾಡೆಯಾಗದ ಅಂಚೆ ವಸ್ತುಗಳ ಅಂತಿಮ ವಿಲೆ:**—ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ವಿಲೆ ಮಾಡಲಾಗದ, ಬಟವಾಡೆಯಾಗದಂಥ ಅಂಚೆ ವಸ್ತುಗಳನ್ನು ಅಂಥ ಹೆಚ್ಚಿನ ಅವಧಿಯವರೆಗೆ (ಯಾವುದಾದರೂ ಇದ್ದರೆ) ಪೋಸ್ಟ್ ಮಾಸ್ಟರ್ ಜನರಲ್ಲನ ಕಚೇರಿಯಲ್ಲಿ ತಡೆಹಿಡಿದಿರಿಸತಕ್ಕದು ಮತ್ತು ಕೇಂದ್ರ ಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವ್ಯವಹರಿಸತಕ್ಕದು :

ಪರಂತು —

(ಕ) ಪತ್ರಗಳು ಮತ್ತು ಪೋಸ್ಟ್ ಕಾರ್ಡುಗಳನ್ನು ನಾಶಪಡಿಸತಕ್ಕದು;

(ಖ) ಬಟವಾಡೆಯಾಗದ ಯಾವುದೇ ಅಂಚೆ ವಸ್ತುವಿನಲ್ಲಿ ಕಂಡುಬಂದ ನಾಶವಾಗುವ ಸ್ವರೂಪದ್ದಲ್ಲದ ಹಣ ಅಥವಾ ಮಾರಾಟ ಮಾಡಬಹುದಾದ ಸ್ವತ್ತನ್ನು, ಪೋಸ್ಟ್‌ಮಾಸ್ಟರ್ ಜನರಲ್ಲನ ಕಚೇರಿಯಲ್ಲಿ ಒಂದು ವರ್ಷದ ಅವಧಿಯವರೆಗೆ ತಡೆಹಿಡಿದಿರಿಸತಕ್ಕದು ಮತ್ತು ಆ ಅವಧಿಯು ಮುಕ್ತಾಯವಾದ ಮೇಲೆ ಅದಕ್ಕೆ ಯಾವನೇ ವ್ಯಕ್ತಿಯು ತನ್ನ ಹಕ್ಕನ್ನು ಸ್ಥಾಪಿಸದಿದ್ದರೆ, ಹಣವಾಗಿದ್ದರೆ ಅಂಚೆ ಇಲಾಖೆಯಲ್ಲಿ ಜಮೆ ಮಾಡತಕ್ಕದು ಮತ್ತು ಮಾರಾಟ ಮಾಡಬಹುದಾದ ಸ್ವತ್ತಾಗಿದ್ದರೆ, ಅದನ್ನು ಮಾರತಕ್ಕದು, ಮಾರಾಟದ ಉತ್ಪನ್ನವನ್ನು ಅಂಚೆ ಇಲಾಖೆಯಲ್ಲಿ ಜಮೆ ಮಾಡತಕ್ಕದು.

## ಅಧ್ಯಾಯ VIII

### ಹಡಗು ಪತ್ರಗಳು

40. **ಭಾರತದಲ್ಲಿನ ಯಾವುದೇ ಬಂದರಿನಿಂದ ಹೊರಡುವ ಮತ್ತು ಅಂಚೆ ಹಡಗು ಆಗಿರದ ಹಡಗಿನ ಮಾಸ್ಟರನು ಅಂಚೆ ಚೀಲಗಳನ್ನು ಸಾಗಿಸುವ ಕರ್ತವ್ಯ:**—ಭಾರತದಲ್ಲಿನ ಯಾವುದೇ ಬಂದರಿನಿಂದ ಭಾರತದೊಳಗಿನ ಯಾವುದೇ ಬಂದರಿಗೆ ಅಥವಾ ಭಾರತದ ಹೊರಗಿನ ಯಾವುದೇ ಬಂದರು ಅಥವಾ ಸ್ಥಳಕ್ಕೆ ಹೊರಡಬೇಕಾಗಿರುವ ಅಂಚೆ ಹಡಗು ಆಗಿರದ ಹಡಗಿನ ಮಾಸ್ಟರನು ಕಳುಹಿಸುವುದಕ್ಕಾಗಿ ಅಂಚೆ ಇಲಾಖೆಯ ಯಾವನೇ ಅಧಿಕಾರಿಯು ತನಗೆ ಒಪ್ಪಿಸಿದ ಯಾವುದೇ ಅಂಚೆ ಚೀಲವನ್ನು ಕೇಂದ್ರ ಸರ್ಕಾರವು ನಿಯಮದ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ಅದಕ್ಕಾಗಿ ರಸೀದಿಯನ್ನು ಕೊಟ್ಟು ಹಡಗು ಕಟ್ಟೆಯಲ್ಲಿ ಸ್ವೀಕರಿಸತಕ್ಕುದು ಮತ್ತು ಅದನ್ನು ವಿಳಂಬವಿಲ್ಲದೆ ಬಂದರು ಅಥವಾ ಗಮ್ಯಸ್ಥಾನಕ್ಕೆ ವಶಾವಣೆ ಮಾಡತಕ್ಕುದು.

41. **ಹಡಗು ಕಟ್ಟೆಯಲ್ಲಿನ ಅಂಚೆ ವಸ್ತುಗಳು ಮತ್ತು ಅಂಚೆ ಚೀಲಗಳ ಸಂಬಂಧದಲ್ಲಿ ಭಾರತದ ಯಾವುದೇ ಬಂದರನ್ನು ತಲುಪುವ ಹಡಗಿನ ಮಾಸ್ಟರನ ಕರ್ತವ್ಯ:**—(1) ಭಾರತದಲ್ಲಿನ ಯಾವುದೇ ಬಂದರನ್ನು ತಲುಪುವ ಹಡಗಿನ ಮಾಸ್ಟರನು ವಿಳಂಬವಿಲ್ಲದೆ, ಆ ಬಂದರಿಗೆ ನಿರ್ದೇಶಿಸಿದಂಥ ಮತ್ತು 4ನೇ ಪ್ರಕರಣದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರದತ್ತವಾದ ಅನನ್ಯ ವಿಶೇಷ ಅಧಿಕಾರಗಳೊಳಗೆ, ಹಡಗುಕಟ್ಟೆಯಲ್ಲಿರುವ ಪ್ರತಿಯೊಂದು ಅಂಚೆ ವಸ್ತು ಅಥವಾ ಚೀಲವನ್ನು ಬಂದರಿನಲ್ಲಿರುವ ಅಂಚೆ ಕಚೇರಿಗೆ ಅಥವಾ ಈ ಬಗ್ಗೆ ಪೋಸ್ಟ್‌ಮಾಸ್ಟರ್ ಜನರಲ್‌ನಿಂದ ಅಧಿಕೃತರಾದ ಅಂಚೆ ಇಲಾಖೆಯ ಕೆಲವು ಅಧಿಕಾರಿಗಳಿಗೆ ಒಪ್ಪಿಸುವಂತೆ ಮಾಡತಕ್ಕುದು.

(2) ಭಾರತದೊಳಗಿನ ಇತರ ಯಾವುದೇ ಸ್ಥಳಕ್ಕೆ ನಿರ್ದೇಶಿಸಿದಂಥ ಮತ್ತು ಹಿಂದೆ ಹೇಳಿದ ಅನನ್ಯ ವಿಶೇಷ ಅಧಿಕಾರಗಳೊಳಗಿನ ಯಾವುದೇ ಅಂಚೆ ವಸ್ತು ಅಥವಾ ಅಂಚೆ ಚೀಲವು ಹಡಗಿನಲ್ಲಿದ್ದರೆ, ಹಡಗಿನ ಮಾಸ್ಟರನು ವಿಳಂಬವಿಲ್ಲದೆ ಆ ಸಂಗತಿಯನ್ನು, ತಲುಪಿದ ಬಂದರಿನಲ್ಲಿನ ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಗೆ ವರದಿ ಮಾಡತಕ್ಕುದು ಮತ್ತು ಅಂಥ ಅಧಿಕಾರಿಯಿಂದ ಅವನು ಪಡೆಯುವ ನಿರ್ದೇಶಗಳಿಗನುಸಾರವಾಗಿ ವರ್ತಿಸತಕ್ಕುದು, ಮತ್ತು ಅಂಥ ಅಧಿಕಾರಿಯ ರಸೀದಿಯು ಅಂಚೆ ವಸ್ತು ಅಥವಾ ಅಂಚೆ ಚೀಲದ ಸಂಬಂಧದಲ್ಲಿ ಅವನನ್ನು ಎಲ್ಲ ಹೆಚ್ಚಿನ ಹೊಣೆಗಾರಿಕೆಗಳಿಂದ ಮುಕ್ತನನ್ನಾಗಿಸತಕ್ಕುದು.

42. **ಅಂಚೆ ಹಡಗುಗಳನ್ನು ಬಿಟ್ಟು ಬೇರೆ ಹಡಗುಗಳ ಮೂಲಕ ಅಂಚೆ ವಸ್ತುಗಳ ಸಾಗಣೆಗಾಗಿ ಉಪದಾನಗಳನ್ನು ಕೊಡುವುದು:**—ಕೇಂದ್ರಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಚೆ ಇಲಾಖೆಯ ಪರವಾಗಿ ಸಾಗಣೆಗಾಗಿ ಅವರು ಸ್ವೀಕರಿಸಿದ ಅಂಚೆ ವಸ್ತುಗಳ ಸಂಬಂಧದಲ್ಲಿ ಅಂಚೆ ಹಡಗುಗಳನ್ನು ಬಿಟ್ಟು ಬೇರೆ ಹಡಗುಗಳ ಮಾಸ್ಟರರಿಗೆ ಯಾವ ಉಪದಾನಗಳನ್ನು ಕೊಡತಕ್ಕುದು ಎಂಬುದನ್ನು ಘೋಷಿಸಬಹುದು ಮತ್ತು ಹಿಂದೆ ಹೇಳಿದಂತೆ ಭಾರತದಲ್ಲಿನ ಯಾವುದೇ ಬಂದರನ್ನು ಬಿಡಲಿರುವ ಅಂಚೆ ಹಡಗಲ್ಲದ ಇತರ ಹಡಗಿನ ಮಾಸ್ಟರನು ಸಾಗಣೆಗಾಗಿ ಅಂಚೆ ಚೀಲವನ್ನು ಹಡಗಿಗೆ ಸ್ವೀಕರಿಸಿದರೆ, ಅಂಚೆ ಚೀಲ ಮತ್ತು ಅದರ ಒಳಾಂಶಗಳಿಗೆ ಸಂಬಂಧಪಟ್ಟಂತೆ, ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಉಪದಾನದ ಮೊಬಲಗನ್ನು ಅವನು ಕೂಡಲೇ ತಗಾದೆಮಾಡಲು ಮತ್ತು ಪಡೆಯಲು ಹಕ್ಕುಳ್ಳವನಾಗಿರತಕ್ಕುದು.

## ಅಧ್ಯಾಯ IX

### ಮನಿಯಾರ್ಡರುಗಳು

43. **ಮನಿಯಾರ್ಡರು ವ್ಯವಸ್ಥೆಯನ್ನು ಇಟ್ಟುಕೊಂಡು ಬರಲು ಮತ್ತು ಆ ಮೂಲಕ ಹಣ ಕಳುಹಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಅಧಿಕಾರ:**—(1) ಕೇಂದ್ರಸರ್ಕಾರವು, ಅಂಚೆ ಇಲಾಖೆಯ ಮೂಲಕ ಸಣ್ಣ ಮೊತ್ತದ ಹಣವನ್ನು ಮನಿಯಾರ್ಡರುಗಳ ರೂಪದಲ್ಲಿ ಕಳುಹಿಸುವುದಕ್ಕಾಗಿ ಉಪಬಂಧಿಸಬಹುದು ಮತ್ತು ಅಂಥ ಮನಿಯಾರ್ಡರುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು—

(ಕ) ಮನಿಯಾರ್ಡರುಗಳನ್ನು ಹೊರಡಿಸಬಹುದಾದಂಥ ಮೊಬಲಗಿನ ಮಿತಿಯನ್ನು;

(ಖ) ಮನಿಯಾರ್ಡರುಗಳು ಚಾಲ್ತಿಯಲ್ಲಿರತಕ್ಕಂಥ ಅವಧಿ; ಮತ್ತು

(ಗ) ಮನಿಯಾರ್ಡರುಗಳ ಮೇಲೆ ಅಥವಾ ಅವುಗಳ ಸಂಬಂಧದಲ್ಲಿ ವಿಧಿಸಬೇಕಾದ ಕಮಿಷನ್ನಿನ ಅಥವಾ ಫೀಜಿನ ದರಗಳನ್ನು

—ನಿಯಮಿಸಬಹುದು.

44. **ಮನಿಯಾರ್ಡರನ್ನು ವಾಪಸು ತರಿಸುವುದಕ್ಕೆ ಅಥವಾ ಹಣ ಪಡೆಯುವವನ ಹೆಸರನ್ನು ಬದಲಾಯಿಸುವುದಕ್ಕೆ ಹಣ ಕಳುಹಿಸುವವನ ಅಧಿಕಾರ:**—ಕಮಿಷನ್ನಿನ ಅಥವಾ ಫೀಜಿನ ಹೆಚ್ಚಿನ ದರಗಳನ್ನು ವಿಧಿಸುವುದರ ಅಥವಾ ಇತರ ಯಾವುವೇ ವಿಷಯಗಳ ಸಂಬಂಧದಲ್ಲಿ 43ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಮನಿಯಾರ್ಡರ್ ರೂಪದಲ್ಲಿ, ಅಂಚೆ ಇಲಾಖೆಯ ಮೂಲಕ ಹಣವನ್ನು ಕಳುಹಿಸುವ ವ್ಯಕ್ತಿಯು ಮನಿಯಾರ್ಡರಿನ ಮೊಬಲಗು ಹಣ ಪಡೆಯುವವನಿಗೆ ಸಂದಾಯವಾಗದಿದ್ದರೆ, ತನಗೆ ಮರು ಸಂದಾಯವಾಗತಕ್ಕುದು ಅಥವಾ ತಾನು ನಿರ್ದೇಶಿಸಬಹುದಾದಂಥ ಮೂಲ ಹಣ ಪಡೆಯುವವನಲ್ಲದ ಇತರ ವ್ಯಕ್ತಿಗೆ ಸಂದಾಯವಾಗತಕ್ಕುದು ಎಂದು ಅಗತ್ಯಪಡಿಸಬಹುದು.

(2) ಮನಿಯಾರ್ಡರಿನ ಹಣ ಪಡೆಯುವವನಾಗಲಿ ಅಥವಾ ಕಳುಹಿಸಿದವನಾಗಲಿ ಸಿಕ್ಕದೆ ಹೋದರೆ, ಮನಿಯಾರ್ಡರನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅಂಥ ಹಣ ಪಡೆಯುವವನು ಅಥವಾ ಹಣ ಕಳುಹಿಸಿದವನು ಯಾವುದೇ ಕ್ಲೇಮನ್ನು ಮಾಡದಿದ್ದರೆ, ಅಂಥ ಮನಿಯಾರ್ಡರಿನ ಮೊಬಲಗನ್ನು ಸರ್ಕಾರದಿಂದ ಕ್ಲೇಮು ಮಾಡತಕ್ಕುದಲ್ಲ.

**45. ಅಂಚೆ ಆದೇಶಗಳನ್ನು ಹೊರಡಿಸುವುದಕ್ಕಾಗಿ ಉಪಬಂಧಿಸಲು ಅಧಿಕಾರ:**—(1) ಕೇಂದ್ರ ಸರ್ಕಾರವು, ಕೆಲವು ನಿರ್ದಿಷ್ಟ ಮೊಬಲಗುಗಳಿಗಾಗಿ, ಪೋಸ್ಟಲ್ ಆರ್ಡರ್‌ಗಳೆಂದು ಕರೆಯುವ ಅಥವಾ ಸಮುಚಿತವೆಂದು ಭಾವಿಸಬಹುದಾದಂಥ ಪದ ನಾಮಗಳಲ್ಲಿ ಮನಿಯಾರ್ಡರುಗಳ ಹೊರಡಿಸುವಿಕೆಯನ್ನು ಮತ್ತು ಅವುಗಳ ಮೇಲೆ ವಿಧಿಸಬೇಕಾದ ಕಮಿಷನ್ನಿನ ದರಗಳಿಗೆ ಸಂಬಂಧಿಸಿದಂತೆ, ಮತ್ತು ಯಾವರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು ಅವುಗಳನ್ನು ಹೊರಡಿಸಬಹುದು, ಸಂದಾಯ ಮಾಡಬಹುದು ಮತ್ತು ರದ್ದುಗೊಳಿಸಬಹುದು ಎಂಬುದರ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ಕೇಂದ್ರಸರ್ಕಾರವು, ಕಾಲಕಾಲಕ್ಕೆ ಹೊರಡಿಸಬಹುದಾದಂಥ ಪೋಸ್ಟಲ್ ಆರ್ಡರ್‌ಗಳ ಗರಿಷ್ಠ ಮಿತಿಯನ್ನು ನಿಯಮಿಸುವ ನಿಯಮಗಳನ್ನೂ ಕೂಡಾ ರಚಿಸಬಹುದು.

**46. ಇತರ ದೇಶಗಳೊಡನೆ ಮಾಡಿಕೊಂಡ ಏರ್ಪಾಡುಗಳನ್ನು ಜಾರಿಗೊಳಿಸುವುದಕ್ಕೆ ಅಧಿಕಾರ:**—(1) ಯುನೈಟೆಡ್ ಕಿಂಗ್‌ಡಂ ಅಥವಾ ಯಾವುದೇ ಬ್ರಿಟಿಷ್ ಸ್ವಾಧೀನದಲ್ಲಿರುವ ದೇಶ ಅಥವಾ ವಿದೇಶಗಳೊಡನೆ, ಭಾರತ ಮತ್ತು ಯುನೈಟೆಡ್ ಕಿಂಗ್‌ಡಂ ಅಥವಾ ಅಂಥ ಸ್ವಾಧೀನದೇಶ ಅಥವಾ ದೇಶಗಳ ನಡುವೆ ಅಂಚೆ ಇಲಾಖೆಯ ಮೂಲಕ ಮನಿಯಾರ್ಡರುಗಳನ್ನು ಹೊರಡಿಸುವ ಮತ್ತು ಸಂದಾಯ ಮಾಡುವ ಏರ್ಪಾಡುಗಳು ಜಾರಿಯಲ್ಲಿರುವಲ್ಲಿ ಕೇಂದ್ರ ಸರ್ಕಾರವು ಅಂಥ ಏರ್ಪಾಡುಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು—

(ಕ) ಯಾವ ರೀತಿಯಲ್ಲಿ, ಮತ್ತು ಯಾವ ಷರತ್ತುಗಳಿಗೊಳಪಟ್ಟು, ಅಂಥ ಮನಿಯಾರ್ಡರುಗಳನ್ನು ಭಾರತದ ಹೊರಡಿಸಬಹುದು ಮತ್ತು ಸಂದಾಯ ಮಾಡಬಹುದೆಂಬುದನ್ನು ; ಮತ್ತು

(ಖ) ಅವುಗಳ ಮೇಲೆ ವಿಧಿಸಬೇಕಾದ ಕಮಿಷನ್ ದರಗಳನ್ನು

—ನಿಯಮಿಸಬಹುದು.

**47. ತಪ್ಪು ವ್ಯಕ್ತಿಗೆ ಸಂದಾಯ ಮಾಡಿದ ಮನಿಯಾರ್ಡರಿನ ವಸೂಲಿ :**—ರುಜುವಾತು ಪಡಿಸುವ ಹೊಣೆ ತನ್ನ ಮೇಲಿರತಕ್ಕ ಯಾವನೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೇ —

(ಕ) ಮನಿಯಾರ್ಡರಿಗೆ ಸಂಬಂಧಿಸಿದಂತೆ ಅವನಿಗೆ ಸಂದಾಯ ಮಾಡಬೇಕಾದ್ದಕ್ಕಿಂತ ಹೆಚ್ಚಾಗಿ, ಅಂಚೆ ಇಲಾಖೆಯ ಅಧಿಕಾರಿಯು ಆ ಸಂಬಂಧದಲ್ಲಿ ಅವನಿಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು, ಅಥವಾ

(ಖ) ಮನಿಯಾರ್ಡರನ್ನು ಯಾರಿಗೆ ಸಂದಾಯ ಮಾಡಬೇಕಾಗಿದ್ದಿತೋ ಆ ವ್ಯಕ್ತಿಯ ಬದಲಾಗಿ ಇತರ ಯಾವನೇ ವ್ಯಕ್ತಿಗೆ ಅಂಚೆ ಇಲಾಖೆಯ ಅಧಿಕಾರಿಯು ಸಂದಾಯ ಮಾಡಿದ ಮೊಬಲಗನ್ನು

—ಮರುಸಂದಾಯ ಮಾಡಲು ಉಪೇಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅಂಥ ಮೊಬಲಗನ್ನು ಈ ಬಗ್ಗೆ ಪೋಸ್ಟ್ ಮಾಸ್ಟರ್ ಜನರಲ್ಲನು ಅಧಿಕೃತಗೊಳಿಸಿದ ಅಂಚೆ ಇಲಾಖೆಯ ಅಧಿಕಾರಿಯು, ಹಾಗೆ ಉಪೇಕ್ಷಿಸುವ ಅಥವಾ ನಿರಾಕರಿಸುವ ವ್ಯಕ್ತಿಯಿಂದ ಬರಬೇಕಾಗಿರುವ ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡತಕ್ಕುದು.

**48. ಮನಿಯಾರ್ಡರುಗಳಿಗೆ ಸಂಬಂಧಿಸಿದಂತೆ ಹೊಣೆಗಾರಿಕೆಯಿಂದ ವಿನಾಯಿತಿ:**—ಸರ್ಕಾರದ ಅಥವಾ ಅಂಚೆ ಇಲಾಖೆಯ ಯಾವನೇ ಅಧಿಕಾರಿಯ ವಿರುದ್ಧ—

(ಕ) ಈ ಅಧ್ಯಾಯದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಯಾವುವೇ ನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ; ಅಥವಾ

(ಖ) ಹಣ ಪಡೆಯುವವನ ಹೆಸರು ಮತ್ತು ವಿಳಾಸಕ್ಕೆ ಸಂಬಂಧಿಸಿದಂತೆ. ಹಣ ಕಳುಹಿಸುವವನು ಕೊಟ್ಟ ಸರಿಯಿಲ್ಲದ ಅಥವಾ ಅಪೂರ್ಣ ಮಾಹಿತಿಯಿಂದಾಗಿ ವಿಳೆಯಾದ ಮನಿಯಾರ್ಡರಿನ ತಪ್ಪು ಸಂದಾಯ, ಪರಂತು, ಅಪೂರ್ಣ ಮಾಹಿತಿಯ ಬಗ್ಗೆ, ಹಣ ಪಡೆಯುವವನನ್ನು ಗುರುತಿಸುವ ಉದ್ದೇಶಕ್ಕಾಗಿ ಸಾಕಷ್ಟು ವಿವರಣೆಯೆಂದು ಮಾಹಿತಿಯನ್ನು ಅಂಗೀಕರಿಸುವುದಕ್ಕೆ ಯುಕ್ತ ಸಮರ್ಥನೆ ಇದ್ದಿರಬೇಕು; ಅಥವಾ

(ಗ) ಅಂಚೆ ಇಲಾಖೆಯ ಅಧಿಕಾರಿಯ ಯಾವುದೇ ಆಕಸ್ಮಿಕ ಉಪೇಕ್ಷೆ, ಲೋಪ ಅಥವಾ ತಪ್ಪುಗ್ರಹಿಕೆಯಿಂದಾಗಿ ಯಾವುದೇ ಅಂಥ ಅಧಿಕಾರಿಯ ಮೋಸ ಅಥವಾ ಬುದ್ಧಿಪೂರ್ವಕ ಕಾರ್ಯ ಅಥವಾ ತಪ್ಪಿನಿಂದಲ್ಲದೆ ಯಾವುದೇ ಇತರ ಕಾರಣದಿಂದಾಗಿ ಯಾವುದೇ ಮನಿಯಾರ್ಡರಿನ ಸಂದಾಯವನ್ನು ನಿರಾಕರಿಸಿರುವುದು ಅಥವಾ ವಿಳಂಬ ಮಾಡಿರುವುದು; ಅಥವಾ

(ಘ) ಮನಿಯಾರ್ಡರನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷವು ಮುಕ್ತಾಯವಾದ ತರುವಾಯ ಅದರ ಯಾವುದೇ ತಪ್ಪು ಸಂದಾಯ;

(ಙ) ಕೇಂದ್ರ ಸರ್ಕಾರವು ಸ್ಥಾಪಿಸಿರದ ಯಾವುದೇ ಅಂಚೆ ಕಚೇರಿಯ ಅಧಿಕಾರಿಯು, ಭಾರತದ ಪರಿಮಿತಿಗಳಾಚೆ ಮನಿಯಾರ್ಡರಿನ ಸಂದಾಯದಲ್ಲಿ ಮಾಡಿದ ಯಾವುದೇ ತಪ್ಪು ಸಂದಾಯ ಅಥವಾ ವಿಳಂಬ

—ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

## ಅಧ್ಯಾಯ X

## ದಂಡನೆಗಳು ಮತ್ತು ಪ್ರಕ್ರಿಯೆ

### ಅಂಚೆ ಇಲಾಖೆಯ ಅಧಿಕಾರಿಗಳಿಂದ ಅಪರಾಧಗಳು

**49. ಅಂಚೆ ಚೀಲಗಳು ಅಥವಾ ಅಂಚೆ ವಸ್ತುಗಳನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾದ ವ್ಯಕ್ತಿಯ ದುರ್ನಡತೆಗಾಗಿ ದಂಡನೆ :**—ಅಂಚೆಯ ಮೂಲಕ ಸಾಗಿಸುವಾಗ ಯಾವುದೇ ಅಂಚೆ ಚೀಲ ಅಥವಾ ಯಾವುದೇ ಅಂಚೆ ವಸ್ತುವನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾದ ಯಾರೇ ಆಗಲಿ,—

(ಕ) ಅವನು ಹಾಗೆ ನಿಯೋಜಿತನಾಗಿರುವಾಗ ಮತ್ತಿನ ಸ್ಥಿತಿಯಲ್ಲಿದ್ದರೆ; ಅಥವಾ

(ಖ) ನಿರ್ಲಕ್ಷತೆಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನಾಗಿದ್ದು, ಆ ಮೂಲಕ ಹಿಂದೆ ಹೇಳಿದ ಅಂಥ ಯಾವುದೇ ಅಂಚೆ ಚೀಲ ಅಥವಾ ಅಂಚೆ ವಸ್ತುವಿನ ಸುರಕ್ಷತೆಗೆ ಅಪಾಯ ಉಂಟಾಗಿದ್ದರೆ; ಅಥವಾ

(ಗ) ಹಿಂದೆ ಹೇಳಿದಂಥ ಯಾವುದೇ ಅಂಚೆ ಚೀಲ ಅಥವಾ ಅಂಚೆ ವಸ್ತುವನ್ನು ಸಾಗಿಸುವಲ್ಲಿ ಅಥವಾ ಬಟವಾಡೆ ಮಾಡುವಲ್ಲಿ ದಾರಿಯಲ್ಲಿ ಹೊತ್ತು ಕಳೆದರೆ ಅಥವಾ ವಿಳಂಬವುಂಟು ಮಾಡಿದರೆ; ಅಥವಾ

(ಘ) ಹಿಂದೆ ಹೇಳಿದಂಥ ಯಾವುದೇ ಅಂಚೆ ಚೀಲ ಅಥವಾ ಅಂಚೆ ವಸ್ತುವನ್ನು ಸುರಕ್ಷಿತವಾಗಿ ಸಾಗಿಸಲು ಅಥವಾ ಬಟವಾಡೆ ಮಾಡಲು ಸೂಕ್ತ ಎಚ್ಚರಿಕೆ ಮತ್ತು ಶ್ರದ್ಧೆಯನ್ನು ಉಪಯೋಗಿಸದಿದ್ದರೆ

—ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

**50. ಅಂಚೆ ಚೀಲಗಳು ಮತ್ತು ಅಂಚೆ ವಸ್ತುಗಳನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾದ ವ್ಯಕ್ತಿಯು ಅನುಮತಿಯಿಲ್ಲದ ಅಥವಾ ನೋಟೀಸು ಕೊಡದೆ ಕರ್ತವ್ಯದಿಂದ ಸ್ವಇಚ್ಛೆಯಿಂದ ಹಿಂತೆಗೆಯುವುದಕ್ಕಾಗಿ ದಂಡನೆ:**—ಅಂಚೆಯ ಮೂಲಕ ರವಾನಿಸುವಾಗ ಯಾವುದೇ ಅಂಚೆ ಚೀಲ ಅಥವಾ ಯಾವುದೇ ಅಂಚೆ ವಸ್ತುವನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾಗಿರುವ ಯಾರೇ ಆಗಲಿ, ಅನುಮತಿಯಿಲ್ಲದೆ ಅಥವಾ ಬರಹದಲ್ಲಿನ ಒಂದು ತಿಂಗಳ ಪೂರ್ವ ನೋಟೀಸನ್ನು ಕೊಡದೆಯೇ ಸ್ವಇಚ್ಛೆಯಿಂದ ತನ್ನ ಪದದ ಕರ್ತವ್ಯಗಳಿಂದ ಹಿಂತೆಗೆದರೆ, ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**51. ಅಂಚೆ ವಸ್ತುಗಳನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾದ ವ್ಯಕ್ತಿಯು ಇಟ್ಟಿರುವ ರಿಜಿಸ್ಟರಿನಲ್ಲಿ ಸುಳ್ಳು ನಮೂದನೆ ಮಾಡುವುದಕ್ಕಾಗಿ ದಂಡನೆ:**—ಅಂಚೆಯ ಮೂಲಕ ಕಳುಹಿಸುವಾಗ ಯಾವುದೇ ಅಂಚೆ ವಸ್ತುವನ್ನು ಒಯ್ಯಲು ಅಥವಾ ಬಟವಾಡೆ ಮಾಡಲು ನಿಯೋಜಿತನಾದ ಮತ್ತು ಹಾಗೆ ನಿಯೋಜಿತನಾಗಿರುವಾಗ ಯಾವುದೇ ರಿಜಿಸ್ಟರನ್ನು ಇಡಲು ಅಗತ್ಯಪಡಿಸಿರುವ ಯಾರೇ ಆಗಲಿ, ಹೋಗಿಲ್ಲದ ಅಥವಾ ಬಟವಾಡೆ ಮಾಡಿಲ್ಲದಂಥ ಸ್ಥಳಕ್ಕೆ ಅವನು ಹೋಗಿರುವನೆಂದೂ ಅಥವಾ ಅಂಚೆ ವಸ್ತುವನ್ನು ಬಟವಾಡೆ ಮಾಡಿದ್ದನೆಂದು ನಂಬಿಕೆಯನ್ನು ಉಂಟು ಮಾಡುವ ಉದ್ದೇಶದಿಂದ ರಿಜಿಸ್ಟರಿನಲ್ಲಿ ಯಾವುದೇ ಸುಳ್ಳು ನಮೂದನೆಯನ್ನು ಮಾಡಿದ್ದರೆ, ಅಥವಾ ಮಾಡಿಸಿದರೆ ಅಥವಾ ಮಾಡಲು ಅವಕಾಶ ಮಾಡಿ ಕೊಟ್ಟರೆ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**52. ಅಂಚೆ ವಸ್ತುಗಳ ಕಳವು, ಅಪ್ರಾಮಾಣಿಕ ದುರ್ವಿನಿಯೋಗ, ಬಚ್ಚಿಡುವಿಕೆ, ನಾಶ ಅಥವಾ ಬಿಸಾಡುವುದಕ್ಕಾಗಿ ದಂಡನೆ:**—ಅಂಚೆ ಇಲಾಖೆಯ ಅಧಿಕಾರಿಯಾಗಿರುವ ಯಾರೇ ಆಗಲಿ, ಅಂಚೆಯ ಮೂಲಕ ರವಾನಿಸುವಾಗ ಯಾವುದೇ ಅಂಚೆ ವಸ್ತುವನ್ನು ಅಥವಾ ಅದರಲ್ಲಿರುವ ಯಾವುದನ್ನಾದರೂ ಕಳವು ಮಾಡಿದರೆ ಅಥವಾ ಅದನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸಿದರೆ, ಅಥವಾ ಯಾವ ಉದ್ದೇಶಕ್ಕಾಗಿಯೇ ಆಗಲಿ ಅದನ್ನು ಬಚ್ಚಿಟ್ಟರೆ, ನಾಶಪಡಿಸಿದರೆ ಅಥವಾ ಬಿಸಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡನೀಯನಾಗತಕ್ಕದ್ದು, ಮತ್ತು ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು.

**53. ಅಂಚೆ ವಸ್ತುಗಳನ್ನು ತೆರೆಯುವ, ತಡೆಹಿಡಿದಿಡುವ ಅಥವಾ ವಿಳಂಬ ಮಾಡುವುದಕ್ಕಾಗಿ ದಂಡನೆ:**—ಅಂಚೆ ಇಲಾಖೆಯ ಅಧಿಕಾರಿಯಾಗಿರುವ ಯಾರೇ ಆಗಲಿ, ತನ್ನ ಕರ್ತವ್ಯಕ್ಕೆ ತದ್ವಿರುದ್ಧವಾಗಿ ಅಂಚೆಯ ಮೂಲಕ ರವಾನಿಸುವಾಗ ಯಾವುದೇ ಅಂಚೆ ವಸ್ತುವನ್ನು ತೆರೆದರೆ ಅಥವಾ ತೆರೆಯುವಂತೆ ಮಾಡಿದರೆ ಅಥವಾ ತೆರೆಯಲವಕಾಶ ಕೊಟ್ಟರೆ ಅಥವಾ ಉದ್ದೇಶಪೂರ್ವಕವಾಗಿ ತಡೆ ಹಿಡಿದರೆ ಅಥವಾ ವಿಳಂಬ ಮಾಡಿದರೆ, ಅಥವಾ ಯಾವುದೇ ಅಂಚೆ ವಸ್ತುವನ್ನು ತಡೆಹಿಡಿದಿರಿಸುವಂತೆ ಅಥವಾ ವಿಳಂಬ ಮಾಡುವಂತೆ ಮಾಡಿಸಿದರೆ ಅಥವಾ ಅದಕ್ಕೆ ಅವಕಾಶ ಮಾಡಿಕೊಟ್ಟರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ ಈ ಅಧಿನಿಯಮದ ಅಧಿಕಾರದ ಮೇರೆಗೆ ಅಥವಾ ಕೇಂದ್ರ ಸರ್ಕಾರದ ಬರಹದಲ್ಲಿನ ಆದೇಶದ ಅಥವಾ ಸಕ್ಷಮ ನ್ಯಾಯಾಲಯದ ನಿರ್ದೇಶನದ ಪಾಲನೆಯಲ್ಲಿ ಯಾವುದೇ ಅಂಚೆ ವಸ್ತುವನ್ನು ತೆರೆಯುವುದಕ್ಕೆ, ತಡೆಹಿಡಿದಿರಿಸುವುದಕ್ಕೆ ಅಥವಾ ವಿಳಂಬ ಮಾಡುವುದಕ್ಕೆ ವ್ಯಾಪ್ತವಾಗತಕ್ಕದಲ್ಲ.

**54. ಅಧಿಕೃತ ಗುರುತುಗಳಿಗೆ ಸಂಬಂಧಿಸಿದಂತೆ ಮೋಸಕ್ಕಾಗಿ ಮತ್ತು ಹೆಚ್ಚಿನ ಅಂಚೆ ಹಾಸಲಿನ ಸ್ವೀಕಾರಕ್ಕಾಗಿ ದಂಡನೆ :**—ಅಂಚೆ ಇಲಾಖೆಯ ಅಧಿಕಾರಿಯಾಗಿರುವ ಯಾರೇ ಆಗಲಿ,—

(ಕ) ಅಂಚೆ ವಸ್ತುವಿನ ಮೇಲೆ ಯಾವುದೇ ತಪ್ಪು ಅಧಿಕೃತ ಗುರುತನ್ನು ಮೋಸದಿಂದ ಹಾಕಿದರೆ; ಅಥವಾ

(ಖ) ಅಂಚೆ ವಸ್ತುವಿನ ಮೇಲಿರುವಂಥ ಯಾವುದೇ ಅಧಿಕೃತ ಗುರುತನ್ನು ಮೋಸದಿಂದ ಬದಲಾಯಿಸಿದರೆ, ತೆಗೆದು ಹಾಕಿದರೆ ಅಥವಾ ಕಾಣದ ಹಾಗೆ ಮಾಡಿಸಿದರೆ; ಅಥವಾ

(ಗ) ಯಾವುದೇ ಅಂಚೆ ವಸ್ತುವಿನ ಬಟವಾಡೆಯನ್ನು ವಹಿಸಲಾಗಿದ್ದು ಈ ಅಧಿನಿಯಮದ ಮೇರೆಗೆ ವಿಧಿಸಲಾಗದಂಥ ಅಂಚೆ ಹಾಸಲಿಗೆ ಸಂಬಂಧಿಸಿದಂತೆ ಯಾವುದೇ ಹಣದ ಮೊತ್ತವನ್ನು ತಿಳಿದೂತಿಳಿದೂ ತಗಾದೆ ಮಾಡಿದರೆ ಅಥವಾ ಸ್ವೀಕರಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡನೀಯನಾಗತಕ್ಕದು ಮತ್ತು ಜುಲ್ಮಾನೆಯಿಂದಲೂ ಸಹ ದಂಡನೀಯನಾಗತಕ್ಕದು.

**55. ಅಂಚೆ ಕಚೇರಿ ದಸ್ತಾವೇಜುಗಳನ್ನು ಮೋಸದಿಂದ ತಯಾರಿಸುವ, ಬದಲಾಯಿಸುವ, ಬಚ್ಚಿಡುವ ಅಥವಾ ನಾಶಪಡಿಸುವುದಕ್ಕಾಗಿ ದಂಡನೆ:**—ಯಾವುದೇ ದಸ್ತಾವೇಜನ್ನು ತಯಾರಿಸುವ ಅಥವಾ ಇಡುವುದನ್ನು ವಹಿಸಿಕೊಡಲಾದ ಅಂಚೆ ಇಲಾಖೆಯ ಅಧಿಕಾರಿಯಾಗಿರುವ ಯಾರೇ ಆಗಲಿ ದಸ್ತಾವೇಜನ್ನು ಮೋಸದಿಂದ ತಪ್ಪಾಗಿ ತಯಾರಿಸಿದರೆ ಅಥವಾ ಆ ದಸ್ತಾವೇಜನ್ನು ಬದಲಾಯಿಸಿದರೆ ಅಥವಾ ಬಚ್ಚಿಟ್ಟರೆ ಅಥವಾ ನಾಶಪಡಿಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದು, ಮತ್ತು ಜುಲ್ಮಾನೆಯಿಂದಲೂ ಸಹ ದಂಡನೀಯನಾಗತಕ್ಕದು.

**56. ಹಣ ಸಂದಾಯ ಮಾಡದ ಅಂಚೆ ವಸ್ತುಗಳನ್ನು ಮೋಸದಿಂದ ಕಳುಹಿಸುವುದಕ್ಕಾಗಿ ದಂಡನೆ:**—ಅಂಚೆ ಇಲಾಖೆಯ ಅಧಿಕಾರಿಯಾಗಿರುವ ಯಾರೇ ಆಗಲಿ, ಯಾವ ಅಂಚೆ ವಸ್ತುವಿನ ಮೇಲೆ ಅಂಚೆ ಹಾಸಲನ್ನು ಈ ಅಧಿನಿಯಮದ ಮೂಲಕ ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡಿಲ್ಲವೋ ಅಥವಾ ವಿಧಿಸಿಲ್ಲವೋ ಆ ಯಾವುದೇ ಅಂಚೆ ವಸ್ತುವನ್ನು, ಆ ಮೂಲಕ ಅಂಥ ಅಂಚೆ ವಸ್ತುವಿನ ಮೇಲಿನ ಅಂಚೆ ಹಾಸಲಿನ ಬಗ್ಗೆ ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ಅಂಚೆಯ ಮೂಲಕ ಕಳುಹಿಸಿದರೆ ಅಥವಾ ಅಂಚೆ ಚೀಲದಲ್ಲಿ ಹಾಕಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದು ಮತ್ತು ಜುಲ್ಮಾನೆಯಿಂದಲೂ ಸಹ ದಂಡನೀಯನಾಗತಕ್ಕದು.

**57. ಬುಡಕಟ್ಟು ಪ್ರದೇಶ, ಸೇರುವ ರಾಜ್ಯ ಅಥವಾ ಇತರ ದೇಶೀಯ ರಾಜ್ಯದಲ್ಲಿ ಮಾಡಿದ ಅಪರಾಧಗಳಿಗಾಗಿ ಶಿಕ್ಷೆ:**—1950ರ ಹಣಕಾಸು ಅಧಿನಿಯಮ (1950ರ 75) ಪ್ರಕರಣ II ಮತ್ತು ಅನುಸೂಚಿ IVರ ಮೂಲಕ ನಿರಸಿತವಾಗಿದೆ.

## ಇತರ ಅಪರಾಧಗಳು

**58. 4ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ:**—(1) (ಕ) 4ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಪ್ರದತ್ತವಾದ ಅನನ್ಯ ವಿಶೇಷಾಧಿಕಾರಗಳೊಳಗಿನ ಪತ್ರವನ್ನು ಅಂಚೆ ಮೂಲಕವಲ್ಲದೆ ಅನ್ಯಥಾ ಒಯ್ಯುವ ; ಅಥವಾ

(ಖ) ಹಿಂದೆ ಹೇಳಿದ ಅಂಥ ಅನನ್ಯ ವಿಶೇಷಾಧಿಕಾರಗಳೊಳಗಿನ ಯಾವುದೇ ಪತ್ರವನ್ನು ಅಂಚೆಯ ಮೂಲಕವಲ್ಲದೆ ಅನ್ಯಥಾ ಒಯ್ಯುವುದರ ಬಗ್ಗೆ ಪ್ರಾಸಂಗಿಕವಾದ ಯಾವುದೇ ಸೇವೆಯನ್ನು ನೆರವೇರಿಸುವ; ಅಥವಾ

(ಗ) ಹಿಂದೆ ಹೇಳಿದ ಅಂಥ ಅನನ್ಯ ವಿಶೇಷಾಧಿಕಾರಗಳೊಳಗಿನ ಪತ್ರವನ್ನು ಅಂಚೆ ಮೂಲಕವಲ್ಲದೆ ಅನ್ಯಥಾ ಕಳುಹಿಸುವ ಅಥವಾ ಕಳುಹಿಸುವುದಕ್ಕಾಗಿ ಕೊಡಲಾಗುವ ಅಥವಾ ವರ್ಗಾವಣೆ ಮಾಡುವ; ಅಥವಾ

(ಘ) ಮೇಲೆ ಹೇಳಿದ ಅಂಥ ಅನನ್ಯ ವಿಶೇಷಾಧಿಕಾರಗಳಿಂದ ಹೊರತುಪಡಿಸಿದ ಪತ್ರಗಳನ್ನು ಅಂಚೆ ಮೂಲಕವಲ್ಲದೆ ಅನ್ಯಥಾ ಕಳುಹಿಸುವ ಉದ್ದೇಶಕ್ಕಾಗಿ ಸಂಗ್ರಹ ಮಾಡುವ

—ಯಾರೇ ಆಗಲಿ ಅಂಥ ಪ್ರತಿಯೊಂದು ಪತ್ರಕ್ಕಾಗಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

(2) ಈ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಈಗಾಗಲೇ ಅಪರಾಧಿಯೆಂದು ನಿರ್ಣೀತನಾದ ಯಾರೇ ಆಗಲಿ ಅದರ ಮೇರೆಗೆ ಪುನಃ ಅಪರಾಧಿಯೆಂದು ನಿರ್ಣೀತನಾದರೆ, ಅಂಥ ತರುವಾಯದ ಪ್ರತಿಯೊಂದು ಅಪರಾಧ ನಿರ್ಣಯದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

**59. 5 ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ:**—(1) 5ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಪತ್ರಗಳನ್ನು ಒಯ್ಯುವ, ಸ್ವೀಕರಿಸುವ, ಕೊಡಲಾಗುವ ಅಥವಾ ಬಟವಾಡೆ ಮಾಡುವ ಅಥವಾ ಸಂಗ್ರಹ ಮಾಡುವ ಯಾರೇ ಆಗಲಿ, ಅಂಥ ಪ್ರತಿಯೊಂದು ಪತ್ರಕ್ಕಾಗಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

(2) ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಈಗಾಗಲೇ ಅಪರಾಧಿಯೆಂದು ನಿರ್ಣೀತನಾದ ಯಾರೇ ಆಗಲಿ, ಅದರ ಮೇರೆಗೆ ಪುನಃ ಅಪರಾಧಿಯೆಂದು ನಿರ್ಣೀತನಾದರೆ, ಅಂಥ ತರುವಾಯದ ಪ್ರತಿಯೊಂದು ಅಪರಾಧ ನಿರ್ಣಯದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

**60. 16 ನೇ ಪ್ರಕರಣದ ಮೇರೆಗಿನ ನಿಯಮಗಳ ಉಲ್ಲಂಘನೆಗಾಗಿ ದಂಡನೆ:**—ಅಂಚೆ ಹಾಸಲು ಸ್ಟಾಂಪುಗಳನ್ನು ಮಾರಾಟ ಮಾಡಲು ನೇಮಕಗೊಂಡಿರುವ ಯಾರೇ ಆಗಲಿ,—

(ಕ) ಯಾವುದೇ ಅಂಚೆ ಹಾಸಲು ಸ್ಟಾಂಪು ಅಥವಾ ಅಂಚೆ ಹಾಸಲು ಸ್ಟಾಂಪುಗಳ ಪ್ರಮಾಣಕ್ಕಾಗಿ ಯಾವನೇ ಖರೀದಿದಾರನಿಂದ 16ನೇ ಪ್ರಕರಣದ (3) ನೇ ಉಪಪ್ರಕರಣದ (ಕ) ಖಂಡದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೂಲಕ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಬೆಲೆಯನ್ನು ತೆಗೆದುಕೊಂಡರೆ, ಅವನು ಆರು ತಿಂಗಳವರೆಗೆ ವಿಸ್ತರಿಸ

ಬಹುದಾದಂಥ ಅವಧಿಯ ಕಾರಾವಾಸದಿಂದ, ಅಥವಾ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು; ಅಥವಾ

(ಖ) 16ನೇ ಪ್ರಕರಣದ ಮೇರೆಗೆ ರಚಿಸಿದ ಇತರ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ, ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**61. 19ಕ ಅಥವಾ 20ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ:**–(1) 19ನೇ ಪ್ರಕರಣ, 19ಕ ಪ್ರಕರಣ ಅಥವಾ 20ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಅಂಚೆ ವಸ್ತು ಅಥವಾ ಇತರ ವಸ್ತುವನ್ನು ಕಳುಹಿಸುವ ಅಥವಾ ಅಂಚೆಯ ಮೂಲಕ ಕಳುಹಿಸುವುದಕ್ಕಾಗಿ ಕೊಡಮಾಡುವ ಅಥವಾ ವಹಿಸಿಕೊಡುವ ಯಾರೇ ಆಗಲಿ, ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಯಾವುದೇ ಅಂಚೆ ವಸ್ತುವನ್ನು 19ನೇ ಪ್ರಕರಣ, 19ಕ ಪ್ರಕರಣ ಅಥವಾ 20ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸಿ ಕಳುಹಿಸಲಾಗಿದೆಯೆಂಬ ಕಾರಣದ ಮೇಲೆ ಅಂಚೆ ಇಲಾಖೆಯಲ್ಲಿ ತಡೆಹಿಡಿಯುವಿಕೆಯು, ಅಂಚೆ ವಸ್ತುವನ್ನು ಅಂಚೆಯ ಯುಕ್ತ ಕ್ರಮದಲ್ಲಿ ಬಟವಾಡೆ ಮಾಡಲಾಗಿದ್ದಿದ್ದರೆ ಯಾವ ವ್ಯವಹರಣೆಗಳನ್ನು ಕೈಗೊಳ್ಳಬಹುದಾಗಿತ್ತೋ ಆ ಯಾವುದೇ ವ್ಯವಹರಣೆಗಳಿಂದ ಕಳುಹಿಸುವವನನ್ನು ವಿನಾಯಿತಿಗೊಳಿಸತಕ್ಕುದಲ್ಲ.

**62. ಅಂಚೆ ಕಚೇರಿಯ ಅಂಚೆ ಪೆಟ್ಟಿಗೆಗಳನ್ನು ಕೆಡಿಸುವುದಕ್ಕೆ ಅಥವಾ ಹಾನಿಗೊಳಿಸುವುದಕ್ಕೆ ದಂಡನೆ:**—ಅಂಚೆ ವಸ್ತುಗಳನ್ನು ಸ್ವೀಕರಿಸಲು ಅಂಚೆ ಇಲಾಖೆಯು ಒದಗಿಸಿರುವ ಯಾವುದೇ ಅಂಚೆ ಪೆಟ್ಟಿಗೆಯಲ್ಲಿ ಅಥವಾ ಅದರ ಎದುರಿನಲ್ಲಿ ಯಾವುದೇ ಬೆಂಕಿ, ಬೆಂಕಿಕಡ್ಡಿ ಅಥವಾ ದೀಪ, ಯಾವುದೇ ಸ್ಫೋಟಕ, ಅಪಾಯಕರ, ಹೊಲಸು, ಅಸಹ್ಯಕರ ಅಥವಾ ಹಾನಿಕಾರಕ ವಸ್ತುವನ್ನು ಅಥವಾ ದ್ರವವನ್ನು ಇರಿಸುವ ಅಥವಾ ಯಾವುದೇ ಅಂಥ ಅಂಚೆ ಪೆಟ್ಟಿಗೆಯಲ್ಲಿ ಅಥವಾ ಅದರ ಎದುರಿನಲ್ಲಿ ಹೇಸಿಕೆಯನ್ನುಂಟು ಮಾಡುವ ಅಥವಾ ಯಾವುದೇ ಅಂಥ ಅಂಚೆ ಪೆಟ್ಟಿಗೆ ಅಥವಾ ಅದರ ಲಗತ್ತುಗಳಿಗೆ ಅಥವಾ ಒಳಾಂಶಗಳಿಗೆ ಹಾನಿಯುಂಟು ಮಾಡುವ ಸಂಭವವಿರುವ ಏನನ್ನಾದರೂ ಮಾಡುವ ಯಾರೇ ಆಗಲಿ ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**63. ಅಂಚೆ ಕಚೇರಿ ಅಥವಾ ಅಂಚೆ ಕಚೇರಿಯ ಅಂಚೆ ಪೆಟ್ಟಿಗೆಗೆ ವಸ್ತುವನ್ನು ಅಧಿಕಾರವಿಲ್ಲದೆ ಅಂಟಿಸುವುದಕ್ಕೆ ಅಥವಾ ಬಣ್ಣ ಬಳಿಯುವುದು, ಟಾರು ಬಳಿಯುವುದು ಅಥವಾ ವಿರೂಪಗೊಳಿಸುವುದಕ್ಕೆ ದಂಡನೆ:**—ಯಾವುದೇ ಅಂಚೆ ಕಚೇರಿ ಅಥವಾ ಅಂಚೆ ವಸ್ತುಗಳನ್ನು ಸ್ವೀಕರಿಸುವುದಕ್ಕಾಗಿ ಅಂಚೆ ಇಲಾಖೆಯು ಒದಗಿಸಿರುವ ಅಂಚೆ ಪೆಟ್ಟಿಗೆಯಲ್ಲಿ ಅಥವಾ ಅದರ ಮೇಲೆ ಯುಕ್ತ ಅಧಿಕಾರವಿಲ್ಲದೆ, ಯಾವುದೇ ಪ್ರಕಟಣಾ ಪತ್ರ, ಜಾಹೀರಾತು, ನೋಟೀಸು, ಪಟ್ಟಿ, ದಸ್ತಾವೇಜು, ಫಲಕ ಅಥವಾ ಇತರ ವಸ್ತುವನ್ನು ಅಂಟಿಸುವ, ಅಥವಾ ಅದಕ್ಕೆ ಬಣ್ಣ ಬಳಿಯುವ ಅಥವಾ ಟಾರನ್ನು ಬಳಿಯುವ ಅಥವಾ ಅದನ್ನು ಯಾವುದೇ ರೀತಿಯಲ್ಲಿ ವಿರೂಪಗೊಳಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**64. ಸುಳ್ಳು ಘೋಷಣೆಯನ್ನು ಮಾಡುವುದಕ್ಕಾಗಿ ದಂಡನೆ:**—ಅಂಚೆಯ ಮೂಲಕ ಕಳುಹಿಸಬೇಕಾದ ಯಾವುದೇ ಅಂಚೆ ವಸ್ತು ಅಥವಾ ಅದರ ಒಳಾಂಶಗಳು ಅಥವಾ ಅದರ ಮೌಲ್ಯಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲು ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿರುವ ಯಾರೇ ಆಗಲಿ ತನ್ನ ಘೋಷಣೆಯಲ್ಲಿ, ಸುಳ್ಳೆಂದು ತಿಳಿದೂ ಅಥವಾ ಹಾಗೆ ನಂಬಲು ಕಾರಣವಿರುವಂಥ ಅಥವಾ ನಿಜವೆಂದು ನಂಬದಿರುವಂಥ ಯಾವುದೇ ಹೇಳಿಕೆಯನ್ನು ಮಾಡಿದರೆ ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಸರ್ಕಾರವನ್ನು ಮೋಸಗೊಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಘೋಷಣೆಯನ್ನು ಮಾಡಿದರೆ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**65. 40 ಅಥವಾ 41ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪುವ ಹಡಗಿನ ಮಾಸ್ಟರನಿಗೆ ದಂಡನೆ:**—ಹಡಗಿನ ಮಾಸ್ಟರನಾಗಿರುವ ಯಾರೇ ಆಗಲಿ,—

(ಕ) 40ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ ; ಅಥವಾ

(ಖ) ಯಾವ ಯುಕ್ತ ಕಾರಣವಿಲ್ಲದೆ, ಅದನ್ನು ರುಜುವಾತು ಪಡಿಸುವ ಹೊಣೆ ಅವನ ಮೇಲಿರುವುದೋ ಆ ಯುಕ್ತ ಕಾರಣವಿಲ್ಲದೆ, 41ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಯಾವುದೇ ಅಂಚೆ ವಸ್ತು ಅಥವಾ ಅಂಚೆ ಚೀಲವನ್ನು ವಹಿವಾಟು ಮಾಡಲು ಅಥವಾ ತಲುಪುವ ಬಂದರಿನಲ್ಲಿರುವ ಅಂಚೆ ಕಚೇರಿಯ ಪ್ರಭಾರದಲ್ಲಿರುವ ಅಧಿಕಾರಿಯ ನಿರ್ದೇಶಗಳನ್ನು ಪಾಲಿಸಲು ತಪ್ಪಿದರೆ

—ಒಂದು ಸಾವಿರ ರೂಪಾಯಿಗಳವರೆಗ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು .

**66. ಬಂದರನ್ನು ತಲುಪುವ ನೌಕೆಯಲ್ಲಿ ಪತ್ರಗಳನ್ನು ತಡೆಹಿಡಿದಿರಿಸುವುದಕ್ಕಾಗಿ ದಂಡನೆ :**—ಭಾರತದಲ್ಲಿನ ಯಾವುದೇ ಬಂದರನ್ನು ತಲುಪುವ ಹಡಗಿನ ಮಾಸ್ಟರನಾಗಿರುವ ಅಥವಾ ಹಡಗಿನಲ್ಲಿರುವ ಯಾರೇ ಆಗಲಿ ತಲುಪುವ ಬಂದರಿನಲ್ಲಿನ ಅಂಚೆ ಕಚೇರಿಗೆ ಹಡಗಿನಲ್ಲಿರುವ ಅಂಚೆ ವಸ್ತುಗಳನ್ನು ಅಥವಾ ಅವುಗಳಲ್ಲಿ ಯಾವುದನ್ನಾದರೂ ಕಳುಹಿಸಿದ ತರುವಾಯ, 4ನೇ ಪ್ರಕರಣದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರದಾನ ಮಾಡಿದ ಅನನ್ಯ ವಿಶೇಷಾಧಿಕಾರದೊಳಗೆ ಯಾವುದೇ ಅಂಚೆ ವಸ್ತುವನ್ನು ತನ್ನ ಗಂಟುಮೂಟೆಯಲ್ಲಿ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ತಿಳಿದೂ ತಿಳಿದೂ ಹೊಂದಿದ್ದರೆ, ಅವನು ಹಿಂದೆ ಹೇಳಿದಂಥ ಪ್ರತಿಯೊಂದು ಅಂಚೆ ವಸ್ತುವಿನ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(2) ಹಿಂದೆ ಹೇಳಿದಂಥ ಪೋಸ್ಟ್‌ಮಾಸ್ಟರ್ ಅಥವಾ ಇತರ ವ್ಯಕ್ತಿಯಾಗಿರುವ, ಯಾರೇ ಆಗಲಿ, ಅಂಚೆ ಇಲಾಖೆಯ ಅಧಿಕಾರಿಯು ಅದಕ್ಕಾಗಿ ತಗಾದೆ ಮಾಡಿದ ತರುವಾಯ, ಹಿಂದೆ ಹೇಳಿದಂಥ ಯಾವುದೇ ಅಂಚೆ ವಸ್ತುವನ್ನು ತಡೆಹಿಡಿದಿರಿಸಿದರೇ ಅಂಥ ಪ್ರತಿಯೊಂದು ಅಂಚೆ ವಸ್ತುವಿನ ಬಗ್ಗೆ ಅವನು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**67. ಅಂಚೆಗಳನ್ನು ತಡೆಹಿಡಿದಿರಿಸುವುದಕ್ಕಾಗಿ ಅಥವಾ ಅಂಚೆ ಚೀಲವನ್ನು ತೆರೆಯುವುದಕ್ಕಾಗಿ ದಂಡನೆ :**—ಯಾರೇ ಆಗಲಿ, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮದ ಅಧಿಕಾರದ ಮೇರೆಗೆ ಅಥವಾ ಕೇಂದ್ರ ಸರ್ಕಾರದ ಬರಹದಲ್ಲಿನ ಆದೇಶದ ಅಥವಾ ಸಕ್ಷಮ ನ್ಯಾಯಾಲಯದ ನಿರ್ದೇಶಗಳ ಪಾಲನೆಯಲ್ಲಿ ಅಲ್ಲದೆ, ಅಂಚೆ ಮೂಲಕ ಕಳುಹಿಸುವಲ್ಲಿ ಅಂಚೆಯನ್ನು ಅಥವಾ ಯಾವುದೇ ಚೀಲವನ್ನು ಯಾವುದೇ ನೆಪದ ಮೇಲೆ ತೆರೆದರೆ, ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಅಂಚೆಯ ಮೂಲಕ ಕಳುಹಿಸುವಲ್ಲಿ ಅಂಚೆಗಳು ಅಥವಾ ಯಾವುದೇ ಅಂಚೆ ವಸ್ತುವನ್ನು ಒಯ್ಯುವ ಅಂಚೆ ಇಲಾಖೆಯ ಅಧಿಕಾರಿಯನ್ನು, 1898ರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (1898ರ 5) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಸಂಜ್ಞೇಯವೆಂಬುದಾಗಿ ಘೋಷಿಸಿದ ಅಪರಾಧವನ್ನು ಮಾಡಿದ್ದಾನೆಂಬ ಆರೋಪದ ಮೇಲೆ ಬಂಧಿಸುವುದನ್ನು ತಡೆಗಟ್ಟತಕ್ಕುದಲ್ಲ.

**68. ತಪ್ಪಾಗಿ ಬಟವಾಡೆ ಮಾಡಿದ ಅಂಚೆ ವಸ್ತುಗಳು ಅಥವಾ ಅಂಚೆ ಚೀಲಗಳನ್ನು ಇಟ್ಟುಕೊಳ್ಳುವುದಕ್ಕಾಗಿ ದಂಡನೆ:**—ಯಾರೇ ಆಗಲಿ, ಅಂಚೆಯ ಮೂಲಕ ಕಳುಹಿಸುವಲ್ಲಿ ಇತರ ಯಾವನೇ ವ್ಯಕ್ತಿಗೆ ಬಟವಾಡೆ ಮಾಡಬೇಕಾಗಿರತಕ್ಕಂಥ ಯಾವುದೇ ಅಂಚೆ ವಸ್ತು ಅಥವಾ ಅಂಚೆ ವಸ್ತುವನ್ನೊಳಗೊಂಡಿರುವ ಅಂಚೆ ಚೀಲವನ್ನು ಮೋಸದಿಂದ ಇಟ್ಟುಕೊಂಡರೆ ಅಥವಾ ಬುದ್ಧಿಪೂರ್ವಕವಾಗಿ ಬಚ್ಚಿಟ್ಟರೆ ಅಥವಾ ತೆಗೆದುಕೊಂಡು ಹೋದರೆ ಅಥವಾ ಇಟ್ಟುಕೊಂಡರೆ ಅಥವಾ ತಡೆಹಿಡಿದಿರಿಸಿದರೆ ಅಥವಾ ಅಂಚೆ ಇಲಾಖೆಯ ಅಧಿಕಾರಿಯು ಅಗತ್ಯಪಡಿಸಿದಾಗ ವಶಾವಣೆ ಮಾಡಲು ಉಪೇಕ್ಷಿಸಿದರೆ ಅಥವಾ ನಿರಾಕರಿಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು, ಮತ್ತು ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕುದು.

**69. ಕಾನೂನು ಬಾಹಿರವಾಗಿ ಪತ್ರಗಳನ್ನು ಮಾರ್ಗಪಲ್ಲಟಗೊಳಿಸುವುದಕ್ಕಾಗಿ ದಂಡನೆ:**— ಅಂಚೆ ಇಲಾಖೆಯ ಅಧಿಕಾರಿಯಾಗಿರದ ಯಾರೇ ಆಗಲಿ, ಯಾವನೇ ವ್ಯಕ್ತಿಗೆ ಹಾನಿ ಉಂಟುಮಾಡಬೇಕೆಂಬ ಉದ್ದೇಶದಿಂದ ಬಟವಾಡೆ ಮಾಡಬೇಕಾಗಿದ್ದಂಥ ಯಾವುದೇ ಪತ್ರವನ್ನು ಬುದ್ಧಿಪೂರ್ವಕವಾಗಿ ಮತ್ತು ದ್ವೇಷಪೂರ್ವಕವಾಗಿ ತೆರೆದರೆ ಅಥವಾ ತೆರೆಯುವಂತೆ ಮಾಡಿದರೆ ಅಥವಾ ಅದರಿಂದ ಯಾವನೇ ವ್ಯಕ್ತಿಗೆ, ಕ್ರಮಬದ್ಧವಾಗಿ ಪತ್ರವು ಬಟವಾಡೆಯಾಗುವುದನ್ನು ತಡೆಗಟ್ಟುವ ಅಥವಾ ಅಡಚಣೆಯನ್ನುಂಟು ಮಾಡುವ ಯಾವುದೇ ಕಾರ್ಯವನ್ನು ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು :

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಈ ಪ್ರಕರಣವು ಅನ್ವಯಿಸುವಂಥ ಯಾವುದೇ ಕಾರ್ಯವನ್ನು ಮಾಡುವ ವ್ಯಕ್ತಿಗೆ, ಅವನು ವಿಳಾಸದಾರನ ತಂದೆ ತಾಯಿಯಾಗಿದ್ದರೆ ಅಥವಾ ತಂದೆ ತಾಯಿ ಅಥವಾ ಪಾಲಕನ ಸ್ಥಾನದಲ್ಲಿದ್ದರೆ ಮತ್ತು ವಿಳಾಸದಾರನು ಅಪ್ರಾಪ್ತ ವಯಸ್ಕ ಅಥವಾ ಪ್ರತಿಪಾಲಿತನಾಗಿದ್ದರೆ ಅನ್ವಯವಾಗತಕ್ಕುದಲ್ಲ.

## ಸಾಮಾನ್ಯ

**70. ಈ ಅಧಿನಿಯಮದ ಮೇರೆಗೆ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸುವುದಕ್ಕಾಗಿ ಅಥವಾ ಪ್ರಯತ್ನಿಸುವುದಕ್ಕಾಗಿ ದಂಡ:**—ಯಾರೇ ಆಗಲಿ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಲು ದುಷ್ಪ್ರೇರಿಸಿದ್ದಕ್ಕೆ ಅಥವಾ ಹಾಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಲು ಪ್ರಯತ್ನಿಸಿದರೆ, ಅವನು ಆ ಅಪರಾಧಕ್ಕಾಗಿ ಉಪಬಂಧಿಸಿದ ಶಿಕ್ಷೆಯಿಂದ ದಂಡನೀಯನಾಗತಕ್ಕುದು.

**71. ಅಪರಾಧಗಳ ಸಂದರ್ಭಗಳಲ್ಲಿ ಸ್ವತ್ತನ್ನು ಅಂಚೆ ಕಚೇರಿಯಲ್ಲಿ ಇಡತಕ್ಕುದು:**—ಅಂಚೆ ಮೂಲಕ ಕಳುಹಿಸಿದ ಅಂಚೆ ಚೀಲ ಅಥವಾ ಯಾವುದೇ ಅಂಚೆ ವಸ್ತುವಿಗೆ ಸಂಬಂಧಿಸಿದಂತೆ, ಅಪರಾಧಕ್ಕಾಗಿನ ಪ್ರತಿಯೊಂದು ಪ್ರಾಸಿಕ್ಯೂಷನ್ನಿನಲ್ಲಿ ಆರೋಪದ ಉದ್ದೇಶಕ್ಕಾಗಿ ಅಂಚೆ ಚೀಲ ಅಥವಾ ಅಂಚೆ ವಸ್ತುವನ್ನು ಅಂಚೆ ಇಲಾಖೆಯ ಸ್ವತ್ತೆಂದು ವಿವರಿಸುವುದು ಸಾಕಷ್ಟಾಗಿರತಕ್ಕುದು ಮತ್ತು ಅಂಚೆ ಚೀಲ ಅಥವಾ ಅಂಚೆ ವಸ್ತುವು ಯಾವುದೇ ಮೌಲ್ಯದ್ದೆಂದು ರುಜುವಾತುಪಡಿಸುವುದು ಅವಶ್ಯವಾಗಿರತಕ್ಕುದಲ್ಲ.

**72. ಈ ಅಧಿನಿಯಮದ ಕೆಲವು ಪ್ರಕರಣಗಳ ಮೇರೆಗಿನ ಪ್ರಾಸಿಕ್ಯೂಷನ್‌ಗಳಿಗಾಗಿ ಅಧಿಕಾರ:**—ಯಾವುದೇ ನ್ಯಾಯಾಲಯವು, ಈ ಅಧಿನಿಯಮದ 51, 53, 54ನೇ ಪ್ರಕರಣದ (ಕ) ಮತ್ತು (ಖ) ಖಂಡಗಳು, 55, 56, 58, 59, 61, 64, 65, 66 ಮತ್ತು 67ನೇ ಪ್ರಕರಣಗಳ ಯಾವುದೇ ಉಪಬಂಧದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಮಹಾ ನಿರ್ದೇಶಕ ಅಥವಾ ಪೋಸ್ಟ್ ಮಾಸ್ಟರ್ ಜನರಲ್‌ನ ಆದೇಶದ ಮೂಲಕ ಅಥವಾ ಅಧಿಕಾರದ ಮೇರೆಗೆ ಮಾಡಿದ ದೂರಿನ ಮೇಲೆ ಹೊರತು ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕುದಲ್ಲ.

## ಅಧ್ಯಾಯ—XI

### ಪೂರಕ

**73. ಜಮೀನುದಾರಿ ಮತ್ತು ಇತರ ಜಿಲ್ಲಾ ಅಂಚೆಗಳು:**—(1) ಕೇಂದ್ರ ಸರ್ಕಾರವು, ಯಾವುದೇ ಜಮೀನುದಾರ ಅಥವಾ ಇತರ ಜಿಲ್ಲಾ ಅಂಚೆಯ ವ್ಯವಸ್ಥಾಪನೆಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಅಧಿನಿಯಮದ ಯಾವ ಭಾಗಗಳು, ಜಮೀನುದಾರಿ ಮತ್ತು ಇತರ ಜಿಲ್ಲಾ ಅಂಚೆಗಳಿಗೆ ಮತ್ತು ಅದರ ಸಂಬಂಧದಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಅನ್ವಯವಾಗತಕ್ಕದೆಂಬುದನ್ನು ಘೋಷಿಸಬಹುದು.

**74. ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಲು ಸಾಮಾನ್ಯ ಅಧಿಕಾರ ಮತ್ತು ಆ ಬಗ್ಗೆ ಉಪಬಂಧಗಳು:**— (1) ಈ ಹಿಂದೆ ಪ್ರದತ್ತವಾದ ಅಧಿಕಾರಗಳ ಜೊತೆಗೆ ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳು ಮತ್ತು ವಿಷಯಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ, ಅದರ ಉಲ್ಲಂಘನೆಯು ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದೆಂದು ಕೇಂದ್ರ ಸರ್ಕಾರವು ನಿರ್ದೇಶಿಸಬಹುದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಎಲ್ಲ ನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದು ಮತ್ತು ಅಂಥ ಪ್ರಕಟಣೆಯಾದ ಮೇಲೆ, ಈ ಅಧಿನಿಯಮದ ಮೂಲಕ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳವಾಗಿರತಕ್ಕದು.

**75. ನಿಯಮ ರಚನಾ ಅಧಿಕಾರಗಳನ್ನು ಹೊರತುಪಡಿಸಿ, ಮಹಾನಿರ್ದೇಶಕರಿಗೆ ಅಧಿಕಾರಗಳ ಪ್ರತ್ಯಾಯೋಜನೆ:**— ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ, ಕೇಂದ್ರ ಸರ್ಕಾರಕ್ಕೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸಲು ನಿರುಪಾಧಿಕವಾಗಿಯಾಗಲಿ ಅಥವಾ ಷರತ್ತುಗಳಿಗೊಳಪಟ್ಟು ಆಗಲಿ ಮಹಾ ನಿರ್ದೇಶಕನನ್ನು ಅಧಿಕೃತಗೊಳಿಸಬಹುದು.

76. (ನಿರಸಿತವಾಗಿದೆ) 1914ರ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮದ (1914ರ 10) 3ನೇ ಪ್ರಕರಣ ಮತ್ತು IIನೇ ಅನುಸೂಚಿ ಮೂಲಕ ನಿರಸಿತವಾಗಿದೆ.

77. (ಉಳಿಸುವಿಕೆಗಳು) 1952ರ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮದ (1952ರ 48) 2ನೇ ಪ್ರಕರಣ ಮತ್ತು 1ನೇ ಅನುಸೂಚಿಯ ಮೂಲಕ ನಿರಸಿತವಾಗಿದೆ.

### ಮೊದಲನೇ ಅನುಸೂಚಿ

**(7ನೇ ಪ್ರಕರಣವನ್ನು ನೋಡಿ)**

**ಒಳನಾಡು ಅಂಚೆ ದರಗಳು**

**ಪತ್ರಗಳು**

| | |
|---|---|
| ಇಪ್ಪತ್ತು ಗ್ರಾಮ್‌ಗಳನ್ನು ಮೀರದ ತೂಕಕ್ಕೆ | ರೂ. 1-00 |
| ಇಪ್ಪತ್ತು ಗ್ರಾಮ್‌ಗಳನ್ನು ಮೀರಿ ಪ್ರತಿಯೊಂದು ಹತ್ತು ಗ್ರಾಮ್ ಅಥವಾ ಅದರ ಭಿನ್ನಾಂಶಕ್ಕೆ | ರೂ. 1-00 |

**ಪತ್ರ ಕಾರ್ಡುಗಳು**

| | |
|---|---|
| ಒಂದು ಪತ್ರ ಕಾರ್ಡಿಗೆ | 75 ಪೈಸೆ |

**ಪೋಸ್ಟ್ ಕಾರ್ಡುಗಳು**

| | |
|---|---|
| (ಮುದ್ರಿತ ಸಂದೇಶಗಳನ್ನೊಳಗೊಂಡ ಪೋಸ್ಟ್‌ಕಾರ್ಡ್ ಅಲ್ಲದ) ಒಂದು ಕಾರ್ಡಿಗೆ | 15 ಪೈಸೆ |
| ಜೋಡಿಗೆ | 30 ಪೈಸೆ |
| ಮುದ್ರಿತ ಸಂದೇಶಗಳನ್ನೊಳಗೊಂಡ ಪೋಸ್ಟ್‌ಕಾರ್ಡಿಗೆ | 60 ಪೈಸೆ |

**ವಿವರಣೆ.**—(ಕಳುಹಿಸುವವನಿಗೆ, ಸಂಬಂಧಪಟ್ಟ ಹೆಸರು ಮತ್ತು ವಿಳಾಸ ಮತ್ತು ಇತರ ವಿವರಗಳು ಮತ್ತು ಕಳುಹಿಸಿದ ಸ್ಥಳ ಮತ್ತು ದಿನಾಂಕವನ್ನು ಹೊರತುಪಡಿಸಿ) ಯಾವುದೇ ವಿಷಯವನ್ನು ಮುದ್ರಣದ ಮೂಲಕ ಅಥವಾ ಸೈಕ್ಲೋಸ್ಟೈಲ್ ಮೂಲಕ ಅಥವಾ ಬೆರಳಚ್ಚಲ್ಲದ ಯಾವುದೇ ಇತರ ಯಾಂತ್ರಿಕ ವಿಧಾನದ ಮೂಲಕ ಪೋಸ್ಟ್‌ಕಾರ್ಡಿನ ವಿಳಾಸದ ಭಾಗದ ಬಲಬದಿ ಅರ್ಧದಷ್ಟನ್ನು ಹೊರತುಪಡಿಸಿ, ಅದರ ಯಾವುದೇ ಭಾಗದ ಮೇಲೆ ಅಭಿಲೇಖಿಸಲಾಗಿದ್ದರೆ, ಪೋಸ್ಟ್‌ಕಾರ್ಡ್ ಮುದ್ರಿತ ಸಂದೇಶವನ್ನು ಒಳಗೊಂಡಿದೆಯೆಂದು ಭಾವಿಸತಕ್ಕದು.

ಪುಸ್ತಕ, ನಮೂನೆ ಮತ್ತು ಮಾದರಿ ಪ್ಯಾಕೆಟುಗಳು

| | |
|---|---|
| ಮೊದಲನೇ ಐವತ್ತು ಗ್ರಾಮುಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ | ರೂ. 1-00 |
| ಐವತ್ತು ಗ್ರಾಮುಗಳನ್ನು ಮೀರಿ ಪ್ರತಿಯೊಂದು ಹೆಚ್ಚಿನ ಐವತ್ತು ಗ್ರಾಮುಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ | ರೂ. 1-00 |

ನೋಂದಾಯಿತ ವೃತ್ತ ಪತ್ರಿಕೆಗಳು

| | |
|---|---|
| ಐವತ್ತು ಗ್ರಾಮುಗಳನ್ನು ಮೀರದ ತೂಕಕ್ಕೆ | 15 ಪೈಸೆ |
| ಐವತ್ತು ಗ್ರಾಮುಗಳನ್ನು ಮೀರಿದ ಆದರೆ ಒಂದು ನೂರು ಗ್ರಾಮುಗಳನ್ನು ಮೀರದ ತೂಕಕ್ಕೆ | 25 ಪೈಸೆ |
| ಒಂದು ನೂರು ಗ್ರಾಮುಗಳನ್ನು ಮೀರಿ ಪ್ರತಿಯೊಂದು ಹೆಚ್ಚಿನ ಒಂದು ನೂರು ಗ್ರಾಮುಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ | 10 ಪೈಸೆ |
| ಒಂದು ಪ್ಯಾಕೆಟಿನಲ್ಲಿ ರವಾನಿಸಲಾಗುತ್ತಿರುವ ನೋಂದಾಯಿತ ವೃತ್ತ ಪತ್ರಿಕೆಯು ಅದೇ ಸಂಚಿಕೆಯು ಒಂದು ಪ್ರತಿಗಿಂತ ಹೆಚ್ಚಿನ ಪ್ರತಿಯು ಸಂದರ್ಭದಲ್ಲಿ ಒಂದು ನೂರು ಗ್ರಾಮುಗಳನ್ನು ಮೀರದ ತೂಕಕ್ಕೆ | 25 ಪೈಸೆ |
| ಒಂದು ನೂರು ಗ್ರಾಮುಗಳನ್ನು ಮೀರಿ ಪ್ರತಿಯೊಂದು ಹೆಚ್ಚಿನ ಒಂದು ನೂರು ಗ್ರಾಮುಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ | 10 ಪೈಸೆ |

ಪರಂತು, ಅಂಥ ಪ್ಯಾಕೇಟನ್ನು ಯಾವನೇ ವಿಳಾಸದಾರನ ನಿವಾಸದಲ್ಲಿ ಬಟವಡೆ ಮಾಡತಕ್ಕದ್ದಲ್ಲ, ಆದರೆ ಅದನ್ನು ಅಂಚೆ ಕಚೇರಿಯಲ್ಲಿಯೇ ಮನ್ನಣೆ ಪಡೆದ ಏಜೆಂಟನಿಗೆ ಕೊಡತಕ್ಕದು.

(ಭಾಂಗಿಗಳು)

| | |
|---|---|
| ಐದು ನೂರು ಗ್ರಾಮುಗಳನ್ನು ಮೀರದ ತೂಕಕ್ಕೆ | ರೂ. 6-00 |
| ಐದು ನೂರು ಗ್ರಾಮುಗಳನ್ನು ಮೀರಿ ಪ್ರತಿಯೊಂದು ಐದು ನೂರು ಗ್ರಾಮುಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ | ರೂ. 6-00 |

(ನಿರಸಿತ)

*　　*　　*　　*

ಮೇಲ್ಕಂಡ ಭಾರತ ಅಂಚೆ ಕಚೇರಿ ಅಧಿನಿಯಮ, 1898 (1898ರ 6)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನವದೆಹಲಿ　　　　ಕಾರ್ಯದರ್ಶಿ.

ದಿನಾಂಕ :　　　　ಭಾರತ ಸರ್ಕಾರ.

The above translation in Kannada of The Indian post office Act, 1898 (6 of 1898) has been authorised by the President to be published in the Official Gazette under clause (a) of Section 2 of the Authoritative Taxts (Central Laws) Act, 1973.

New Delhi

Date :

V. S. RAMADEVI,

Secretary to the Govt. of India.